ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಮಧುಗಿರಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಡಾ. ಬಿ. ನಂಜುಂಡ ಸ್ವಾಮಿ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**MADHUGIRI:** An Introducing Book on the Places in Karnataka that Played a Major Role in the Freedom Struggle, Written by Dr. B. Nanjuda Swamy, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಬಿ. ನಂಜುಂಡ ಸ್ವಾಮಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತ ದೇಶ ಸ್ವಾತಂತ್ರ್ಯ ಪಡೆದದ್ದು ೧೯೪೭ ಆಗಸ್ಟ್ ೧೫ರಂದು. ಅಂದು ಜನ ತುಂಬಾ ಸಂತೋಷದಿಂದ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ಮನೆಮನೆಗಳಲ್ಲಿ ಹಬ್ಬದ ಸಡಗರ ಸಂಭ್ರಮ. ಭಾರತಮಾತೆಯ ಭಾವಚಿತ್ರದ ಪೂಜೆ, ರಾಷ್ಟ್ರಧ್ವಜ ವಂದನೆ, ಪ್ರಭಾತಪೇರಿ ಹೀಗೆ ಹಲವು ವಿಧವಾದ ಆಚರಣೆಯನ್ನು ಮಾಡಿ ಸಂಭ್ರಮಿಸಿದರು. ಆ ದಿನಗಳಲ್ಲಿ ರೇಡಿಯೋ, ಪತ್ರಿಕೆ ಮುಖಾಂತರ ಮಾಹಿತಿಯನ್ನು ತಿಳಿಯಬೇಕಾಗಿತ್ತು. ಈ ನಿಟ್ಟಿನಲ್ಲಿ ಲಕ್ಷಾಂತರ ಜನರ ಹೋರಾಟದಿಂದ ಕನವರಿಸುತ್ತಾ ಇದ್ದ ಸ್ವಾತಂತ್ರ್ಯವನ್ನು ಗಳಿಸಿದೆವು.

ಮನೆಮನೆಯಲ್ಲಿ ಮಕ್ಕಳಿಗೆ ಎಣ್ಣೆಸ್ನಾನ ಮಾಡಿಸಿ, ಶುಭ್ರವಾದ ಬಟ್ಟೆಯನ್ನು ತೊಡಿಸಿ ಮಕ್ಕಳನ್ನು ಸಿದ್ಧಪಡಿಸಿದರಂತೆ ತಾಯಂದಿರು. ಮಕ್ಕಳಿಗೆ ತಮ್ಮ ದಾಸ್ಯ ಕಳೆದು ಸ್ವತಂತ್ರವಾದೆವು ಎಂದು ಸಂತೋಷಪಟ್ಟು ಸಡಗರ ಸಂಭ್ರಮದಿಂದ ಹಬ್ಬದೂಟವನ್ನು ಮಾಡಿದರಂತೆ. ಗುಬ್ಬಿ ವೆಸ್ಲಿಯನ್ ಮಿಶನರಿ ಶಾಲೆಯಲ್ಲಿ ಶಿಕ್ಷಕರಾಗಿದ್ದ ಬಿ. ಶಿವಮೂರ್ತಿಶಾಸ್ತ್ರಿಗಳು ಪಾದ್ರಿಗೆ ಕನ್ನಡ ಪಾಠ ಹೇಳಲು ಗಾಂಧಿ ಟೋಪಿ ಧರಿಸಿ ಹೋಗಿದ್ದಕ್ಕೆ ಅಲ್ಪ ಮೊತ್ತದ ಸಂಬಳದ ಶಿಕ್ಷಕ ಕೆಲಸಕ್ಕೆ ರಾಜೀನಾಮೆ ಕೊಟ್ಟ ಪ್ರಸಂಗ ಹೃದಯಸ್ಪರ್ಶಿ ಆಗಿದೆ.

ಡಾ. ಟಿ. ಎಸ್. ಮಲ್ಲಿಕಾರ್ಜುನಯ್ಯನವರು ದಾಖಲಿಸಿರುವಂತೆ ಆಗಸ್ಟ್ ೧೯, ೧೯೪೨ರಂದು ಶವಪಟ್ಟಿಗೆಯಲ್ಲಿ ಯೂನಿಯನ್ ಜಾಕ್ ಬಾವುಟದ ಪ್ರತಿಯನ್ನು ತಲೆಕೆಳಗಾಗಿ ಕಟ್ಟಿ ಬ್ರಿಟಿಷ್ ಸಾಮ್ರಾಜ್ಯ ಸತ್ತಿತು ಮುಂತಾದ ಘೋಷಣೆಗಳನ್ನು ಕೂಗಿ ಸಾರ್ವಜನಿಕರಿಗೆ ತಿಳಿಯುವಂತೆ ನಾಲ್ಕು ಜನ ವಿದ್ಯಾರ್ಥಿಗಳು ಶವಪೆಟ್ಟಿಗೆಯನ್ನು ಹೊತ್ತುಕೊಂಡು ರಸ್ತೆ ಮಧ್ಯೆ ಬೆಂಕಿ ಇಟ್ಟು ಅಂತ್ಯಕ್ರಿಯೆ ಮಾಡಿದರು. ಈ ಘಟನೆ ಹಿಂದೆ ಖ್ಯಾತ ಕಾದಂಬರಿಕಾರ ತ.ರಾ.ಸು. ಅವರು ಇದ್ದರು. ಅದೇ ದಿನ ಪೋಲೀಸರು ೯೦ ಜನರನ್ನು ಬಂಧಿಸಿದರಂತೆ. ಆ ವಿದ್ಯಾರ್ಥಿಗಳಲ್ಲಿ ಯಮಧೈರ್ಯ ಇದ್ದಿದ್ದರಿಂದ ಸರ್ಕಾರದ ಪೋಲೀಸ್ ಭಯಕ್ಕೆ

ಹೆದರದೆ ಇಷ್ಟು ಧೈರ್ಯವಾಗಿ ಅಣಕು ಶವಯಾತ್ರೆ ಮಾಡುವ ನಿರ್ಧಾರ ತೆಗೆದುಕೊಂಡಿದ್ದು. ರಾಜ್ಯ ಸರ್ಕಾರ, ಕೇಂದ್ರ ಸರಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ ಕೊಟ್ಟು ಗೌರವಿಸಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಈ ಪುಸ್ತಕ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟವರು ಸ್ನೇಹಿತರಾದ ಡಾ. ಮೃತ್ಯುಂಜಯ ರುಮಾಲೆ ಅವರು. ಕೃತಿಯನ್ನು ಪ್ರಕಟಿಸುತ್ತಿರುವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್ ಅವರಿಗೆ, ರಿಜಿಸ್ಟ್ರಾರ್ ಶ್ರೀ ಕರಿಯಪ್ಪ ಅವರಿಗೆ ವಂದನೆಗಳು. ನನಗೆ ಬೇಕಾದ ಪುಸ್ತಕಗಳನ್ನು ನೀಡಿದವರು ಸ್ನೇಹಿತರಾದ ಶ್ರೀ ಎಂ. ಎಚ್. ನಾಗರಾಜ್ ಮತ್ತು ಡಾ. ಡಿ. ಎನ್. ಯೋಗೀಶ್ವರಪ್ಪ ಅವರು. ಪ್ರೀತಿ ಅಭಿಮಾನದಿಂದ ಡಿ.ಟಿ.ಪಿ. ಮಾಡಿದವರು ಬೆಳಗಾವಿಯ ಪ್ರಕಾಶ ಗಿರಿಮಲ್ಲನವರ. ಈ ಎಲ್ಲಾ ಮಹನೀಯರಿಗೂ ವಂದನೆಗಳು.

**– ಡಾ. ಬಿ. ನಂಜುಂಡ ಸ್ವಾಮಿ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ: ಕೂಡ್ಲಿಗಿ | ೧೫ |
| ಪರಾಮರ್ಶನ ಗ್ರಂಥಗಳು | ೪೨ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೪೫ |

# ಸ್ವಾತಂತ್ರ್ಯ ಹೋರಾಟ ಮತ್ತು ಮಧುಗಿರಿ

ಪ್ರಪಂಚದ ಇತಿಹಾಸದಲ್ಲಿ ಭಾರತ ದೇಶಕ್ಕೆ ವಿಶೇಷವಾದ ಸ್ಥಾನ. ಈ ಮಣ್ಣಿನಲ್ಲಿ ಶಿವಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಜೈನ, ಬೌದ್ಧ, ಗಾಣಪತ್ಯ, ಚಾರ್ವಾಕ, ಕ್ರೈಸ್ತ, ಇಸ್ಲಾಂ ಧರ್ಮಗಳು ಹುಲುಸಾಗಿ ಬೆಳೆದಿವೆ. ವಿವಿಧತೆಯಲ್ಲಿ ಏಕತೆ ಈ ಮಣ್ಣಿನ ವಿಶೇಷ ಗುಣ. ಮೊದಲಿನಿಂದಲೂ ಜನಕ್ಕೆ ಸ್ವತಂತ್ರವಾಗಿ ಬದುಕುವುದರ ಬಗ್ಗೆ ಆಸಕ್ತಿ. ಈ ಕಾರಣದಿಂದ ಸರ್ವಜ್ಞ "ಹಂಗಿನರಮನೆಗಿಂತ ಭಂಗದ ಗುಡಿ ಲೇಸು" ಎಂದು ಹೇಳಿರುವುದು. ಭಾರತ ದೇಶದ ನಾನಾ ರಾಜಕೀಯ ಬದಲಾವಣೆಯಿಂದ ಜನರು ದಾಸ್ಯದಲ್ಲಿ ಬದುಕಬೇಕಾದ ಸಂದರ್ಭ ಬಂದಿತ್ತು. ಆ ಸಂದರ್ಭದಲ್ಲಿ ವಿದ್ಯಾಭ್ಯಾಸ ಬೆಳೆದಂತೆ ಜನರ ಆಲೋಚನಾ ಶಕ್ತಿ ಸಹ ಬೆಳೆಯುತ್ತಾ ಬಂತು. ಮಹಾಜನತೆಗೆ ಬ್ರಿಟಿಷರ ತರತಮ ನಡವಳಿಕೆ ಬಗ್ಗೆ ಅರಿವು ಬಂದ ಕೂಡಲೇ ನಾವು ಸ್ವತಂತ್ರರಾಗವೇಕು ಎನ್ನುವ ಮನೋಭಾವದ ತುಡಿತ ಹೆಚ್ಚಾಗಿ ಬೃಹತ್ ಹೋರಾಟದಿಂದ ಸ್ವಾತಂತ್ರ್ಯವನ್ನು ಪಡೆದವು.

ಭಾರತ ದೇಶದ ಒಂದೊಂದು ರಾಜ್ಯದ, ಒಂದೊಂದು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಇತಿಹಾಸ ಬಹಳ ದೊಡ್ಡದು. ಆ ಎಲ್ಲಾ ಇತಿಹಾಸವನ್ನು ಸಂಗ್ರಹಿಸುವುದು ಕಷ್ಟವಾಗಬಹುದು. ಅಲ್ಲಲ್ಲಿ ಅಳಿದು ಉಳಿದಿರುವ ದಾಖಲೆಗಳಿಂದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ರಚಿಸಬೇಕಾಗಿದೆ.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಆರಂಭದ ಬಗ್ಗೆ ಡಾ. ಸೂರ್ಯನಾಥ ಕಾಮತ್ ತಮ್ಮ ಅಭಿಪ್ರಾಯವನ್ನು ಈ ರೀತಿ ನೀಡಿದ್ದಾರೆ. "ಭಾರತವು ಬ್ರಿಟಿಷರ ಕೈವಶವಾದ ಹಂತಗಳನ್ನು ಸ್ಥೂಲವಾಗಿ ಹೀಗೆ ನಿರೂಪಿಸಬಹುದು. ೧೭೫೭ರ ಪ್ಲಾಸಿ ಕದನದ ನಂತರ ಬಂಗಾಳ, ಬಿಹಾರ, ಒರಿಸ್ಸಾ ಆಸ್ಸಾಂಗಳನ್ನೊಳಗೊಂಡ ಬಂಗಾಳ ಪ್ರಾಂತದ ಪತನವಾದುದು; ೧೭೬೫ರಲ್ಲಿ ಮೊಘಲ್ ಸಾಮ್ರಾಟನು ಬಂಗಾಳದ ದಿವಾನಿ ಹಕ್ಕನ್ನು ಬ್ರಿಟಿಷ್

ಕಂಪನಿಗೆ ಕೊಟ್ಟಾಗ ಭಾರತದ ಕೇಂದ್ರ ಪ್ರದೇಶದ ಪರಮಾಧಿಕಾರವು ವಾಸ್ತವವಾಗಿ ಕಂಪನಿಗೆ ಸಂದಂತೆ ಆಯಿತು. (ಡಾ. ಕೆ. ಎಂ. ಪಣಿಕ್ಕರ್) ಮೂರು ಕರ್ನಾಟಕ ಯುದ್ಧಗಳಲ್ಲಿ ಜಯಗಳಿಸಿ ಆರ್ಕಾಟ ನವಾಬನನ್ನು ತಮ್ಮ ಕೈಗೊಂಬೆಯಾಗಿ ಮಾಡಿಕೊಂಡ ಬ್ರಿಟಿಷರು, ೧೮೦೧ರಲ್ಲಿ ಆರ್ಕಾಟಿನ ನವಾಬನ ವಂಶಜನಿಗೆ ಪಿಂಚಣಿ ನೀಡಿ ಆರ್ಕಾಟನ್ನು ತಮ್ಮ ಕೈಗೆ ತೆಗೆದುಕೊಂಡರು. ಮೂರು ಆಂಗ್ಲೋ ಮರಾಠಾ ಯುದ್ಧಗಳ ಕೊನೆಗೆ ಇಡೀ ಮರಾಠಾ ಒಕ್ಕೂಟದ ಮೇಲೆ ಸ್ವಾಮ್ಯ ಸ್ಥಾಪಿಸಿದರು; ಈ ಯುದ್ಧಗಳಲ್ಲಿ ಕೊನೆಯದು ೧೮೧೮ರಲ್ಲಿ ನಡೆದು, ಪೇಶ್ವೆ ಎರಡನೆಯ ಬಾಜೀರಾಯನಿಗೆ ಪಿಂಚಣಿ ನೀಡಿ ಕಾನಪುರಕ್ಕೆ ಕಳುಹಿಸಲಾಗಿತ್ತು. ೧೭೯೯ರಲ್ಲಿ ಮೈಸೂರಿನ ಪತನವಾಗಿ ಮೈಸೂರು, ಮಲಬಾರು, ತಮಿಳುನಾಡಿನ ಹಾಗೂ ಆಂಧ್ರದ ಅನೇಕ ಜಿಲ್ಲೆಗಳು ಅವರ ವಶವಾದವು. ಎರಡು ಆಂಗ್ಲೋ–ಶಿಖ್ ಯುದ್ಧಗಳಾಗಿ ೧೮೪೯ರಲ್ಲಿ ಪೂರ್ತಿ ಪಂಜಾಬ್ ಬ್ರಿಟಿಷ್ಶರ ವಶವಾಯಿತು. ಒಟ್ಟಿನಲ್ಲಿ ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿಯೇ ಭಾರತದ ಬಹುಭಾಗ ಬ್ರಿಟಿಷ್ಶರ ವಶವಾಗಿ ಆ ಶತಮಾನದ ಮಧ್ಯ ಭಾಗದಲ್ಲಿ ಬ್ರಿಟಿಷರು ಇಡೀ ಭಾರತದ ಮೇಲೆ ಪ್ರಭುತ್ವ ಸಾಧಿಸಿದರು.

ಹೀಗೆ ಬ್ರಿಟಿಷ್ಶರು ಭಾರತದಲ್ಲಿ ಆಳುತ್ತಿದ್ದ ಅನೇಕ ಹಿರಿಕಿರಿ ರಾಜ್ಯಗಳನ್ನು ನಾಮಾವಶೇಷ ಮಾಡಿ, ಇಲ್ಲವೆ ಆ ರಾಜರುಗಳನ್ನು ತಮ್ಮ ಮಾಂಡಲೀಕರನ್ನಾಗಿ ಮಾಡಿಕೊಂಡು ಭಾರತದ ಸ್ವಾಮಿಗಳಾದರೂ ಭಾರತದಲ್ಲಿ ಬ್ರಿಟಿಷ್ ಸತ್ತೆಯ ವಿರುದ್ಧ ಸತತವಾಗಿ ಸಶಸ್ತ್ರ ಬಂಡಾಯಗಳು ನಡೆದೇ ಇದ್ದವು. ೧೮೫೭–೫೮ರಲ್ಲಿ ಭಾರಿ ಪ್ರಮಾಣದ ಬಂಡಾಯವು ಇತಿಹಾಸದಲ್ಲಿ ಖ್ಯಾತವಾಗಿವೆ. ಆದರೆ ಅದಕ್ಕೂ ಮೊದಲೇ ಭಾರತದಾದ್ಯಂತವೂ ಕರ್ನಾಟಕದಲ್ಲೂ ಬ್ರಿಟಿಷ್ಶರ ಆಡಳಿತದ ವಿರುದ್ಧ ಅನೇಕ ಪ್ರತಿಭಟನೆಗಳು ನಡೆಯದೇ ಇಲ್ಲ. ಅವುಗಳ ಪಟ್ಟಿ ದೀರ್ಘವಾದದ್ದು. ಆದರೆ ಭಾರತೀಯರ ಸ್ವಾಭಿಮಾನದ, ಸಾಹಸದ ಕತೆ ಇದಾಗಿರುವುದರಿಂದ ಇಂಥ ಪ್ರತಿಭಟನೆಗಳ ಹೆಸರನ್ನಾದರೂ ಉಚ್ಚರಿಸುವುದು ಪುಣ್ಯಕರವೆನಿಸಬಹುದು.

ತುಮಕೂರು ನಗರದಲ್ಲಿ ಆಡಳಿತಾಧಿಕಾರಿಯಾಗಿ ನೆಲೆನಿಂತ ಆರ್. ಎಸ್. ಡಾಬ್ಸ್ ಬರೆದ Reminisences of Life In Mysore, South Africa and Burmah By Major General R. S. Dobbs–೧೮೮೨ ಪುಸ್ತಕದಲ್ಲಿ



೧೮೪೯ರಲ್ಲಿ ಚಿತ್ರದುರ್ಗ ಪಾಳೆಯಗಾರರ ವಂಶಕ್ಕೆ ಸೇರಿದ ಏಳು ಜನ ಬ್ರಿಟಿಷ್ ಸರ್ಕಾರದ ಮೇಲೆ ತಿರುಗಿ ಬಿದ್ದು ಅವರನ್ನು ಭಾರತ ದೇಶದಿಂದಲೇ ಓಡಿಸಲು ನಿರ್ಧರಿಸಿದರು. ಈ ಎಲ್ಲಾ ಮಾಹಿತಿ ಇತಿಹಾಸ ದರ್ಶನ–೨೦೧೮ ಸಂಪುಟ ೩೩, ಪುಟ ೪೮೮–೪೯೫ ಮುದ್ರಣವಾಗಿದೆ. ಆಸಕ್ತರು ಪರಾಂಬರಿಸಬೇಕಾಗಿ ವಿನಂತಿ.

ತುಮಕೂರು ಜಿಲ್ಲೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಬಿ.ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ದಾಖಲಿಸಿದ್ದಾರೆ: "...ಆಗ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿ ಇವು ಜತೆಜತೆಯಲ್ಲೆ ಸಾಗುತ್ತಿದ್ದವು. ಈ ಕಾಲದಲ್ಲಿ ತುಮಕೂರಿಗೆ ಬಂದು ಹೋದ ಕಡಪ ರಾಘವೇಂದ್ರರಾಯರು, ಕೊಪ್ಪಳ ಜಯರಾಮಾಚಾರ್ಯರು, ದೇಶಪಾಂಡೆ ಗಂಗಾಧರರಾಯರು, ಹರ್ಡೇಕರ ಮಂಜಪ್ಪನವರು, ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು ಮೊದಲಾದ ಮಹನೀಯರ ಪರಿಚಯವುಂಟಾಯಿತು. ೧೯೨೭ನೇ ಜುಲೈ ೧೪ರಂದು ಮಹಾತ್ಮ ಗಾಂಧೀಜಿಯವರು, ಸಿ. ರಾಜಗೋಪಾಲಚಾರಿಯವರು, ಮಹದೇವ ದೇಸಾಯಿ ಕೂಡ ತುಮಕೂರಿಗೆ ಸಂದರ್ಶನವಿತ್ತಿದ್ದರು. ದಿನವೂ ನಾನು ಗಾಂಧೀಯವರ ಭಾಷಣವನ್ನು ಕೇಳಲು ಹೋಗುತ್ತಿದ್ದೆನು. ಅವರ ಸರಳ ಹಿಂದೀ ಭಾಷಣಗಳು ಸುಲಭ ಶೈಲಿಯಲ್ಲಿದ್ದುದರಿಂದ ನನಗೆ ತಿಳಿದಿದ್ದ ಹಿಂದೀ ಭಾಷಾಜ್ಞಾನವು ಅವುಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಯಿತು. ಆ ಸಂದರ್ಭದಲ್ಲಿ 'ಗಾಂಧಿ ಗೀತೆಗಳು' ಎಂಬ ಕವನ ಸಂಕಲನದ ಪುಸ್ತಕವನ್ನು ಬರೆದು ಅವರಿಗೆ ಅರ್ಪಿಸಿದೆನು. ಗಾಂಧೀಯವರಿಗೆ ಕನ್ನಡ ಬರುತ್ತಿರಲಿಲ್ಲ. ಆದರೆ ೧೯೨೧ರಲ್ಲಿ ಮಹಾತ್ಮರು ಸತ್ಯಾಗ್ರಹ ಚಳುವಳಿಯನ್ನು ಪ್ರಾರಂಭಿಸಿದುದು ಸರಿಯಷ್ಟೇ? ಆಗ ನಮ್ಮೂರಿನ ಮುಖಂಡರಾಗಿದ್ದ ಕೆ. ರಂಗಯ್ಯಂಗಾರ್, ಟಿ. ಸುಬ್ರಹ್ಮಣ್ಯಂ ಮೊದಲಾದವರು ಪ್ರಾರಂಭಿಸಿದ ಸ್ವದೇಶಿ ಚಳುವಳಿಯು ನನ್ನ ಮನಸ್ಸನ್ನು ಹಿಡಿಯಿತು. ಆ ಮಹನೀಯರು ಜಿಲ್ಲೆಯ ಎಲ್ಲಾ ಭಾಗಕ್ಕೆ ನನ್ನನ್ನು ಜತೆಯಲ್ಲಿ ಭಾಷಣಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಇದರಿಂದ ಜಿಲ್ಲೆಯಲ್ಲಿ ಜನಗಳ ಪರಿಚಯ ನನಗೆ ಹೆಚ್ಚಾಗಿ ಉಂಟಾಯಿತು.

.....೧೯೨೬ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಮೈಸೂರು ದಿವಾನರಾದರು. ಅವರು ತಮ್ಮ ಮೊದಲನೇ ಪ್ರವಾಸವನ್ನು ತುಮಕೂರು

ಜಿಲ್ಲೆಯಲ್ಲಿಟ್ಟುಕೊಂಡರು. ಆಗ ಕಾಂಗ್ರೆಸ್ ಚಳುವಳಿ ಎಲ್ಲೆಲ್ಲೂ ಜೋರಾಗಿತ್ತು. ಮಧುಗಿರಿಯಲ್ಲಿ ಲೋಕಮಾನ್ಯ ತಿಲಕ ಸ್ಮಾರಕ ಮಂದಿರವನ್ನು ನಂಜಯ್ಯಶೆಟ್ಟಿ ಎಂಬ ವೈಶ್ಯ ಶ್ರೀಮಂತರು ಕಟ್ಟಿಸಿಕೊಟ್ಟಿದ್ದರು. ಅದರ ಪ್ರಾರಂಭೋತ್ಸವ ಸರ್ ಮಿರ್ಜಾ ಅವರಿಂದ ನಡೆಯಿತು. ನಾನು ಆ ಸಮಾರಂಭದಲ್ಲಿ ಲೋಕಮಾನ್ಯರನ್ನು ಕುರಿತು ಸ್ವಾಗತ ಗೀತೆಗಳನ್ನು ಬರೆದು ಹಾಡಿ ಅಲ್ಲಿನ ಸಂದರ್ಭಕ್ಕನುಸಾರವಾಗಿ ಭಾಷಣವನ್ನು ಮಾಡಿದೆನು. ಆ ಭಾಗದ ಜನರು ಸಭೆಗೆ ಬಹಳವಾಗಿ ಬಂದಿದ್ದರು. ಗುಣಗ್ರಾಹಿಗಳಾದ ಸರ್ ಮಿರ್ಜಾರವರು ನನ್ನ ಕವಿತಾಶಕ್ತಿ, ವಾಕ್‌ಪ್ರೌಢಿಮೆಯನ್ನು ಗ್ರಹಿಸಿದರು. ಸಭೆ ಮುಗಿದ ಮೇಲೆ ದಿವಾನರು ನನ್ನನ್ನು ಸಮೀಪಕ್ಕೆ ಕರೆದು ಯೋಗಕ್ಷೇಮವನ್ನು ವಿಚಾರಿಸಿಕೊಂಡರು. ನೀವು ಬೆಂಗಳೂರಿಗೆ ಬಂದು ಆದಷ್ಟು ಬೇಗ ನನ್ನನ್ನು ನೋಡಬೇಕು. ನಾನು ಕಾರಲ್‌ಟನ್ ಹೌಸಿನಲ್ಲಿರುತ್ತೇನೆ ಎಂದು ಹೇಳಿದರು. ಮಿರ್ಜಾರವರು ಮೊದಲು ನಾಲ್ವಡಿ ಕೃಷ್ಣರಾಜ ಒಡೆಯರ ಆಪ್ತಕಾರ್ಯದರ್ಶಿಗಳಾಗಿದ್ದರು. ಅನಂತರ ೧೯೨೬ರಲ್ಲಿ ರಾಜ್ಯದ ದಿವಾನರಾದರು. ಅವರ ಕಾಲದಲ್ಲಿ ಮೈಸೂರು ರಾಜ್ಯವು ಎಲ್ಲ ರೀತಿಯಲ್ಲೂ ಅಭಿವೃದ್ಧಿಗೆ ಬಂದಿತು. ಚಕ್ರಗೋಷ್ಠಿಗೆ (ದುಂಡುಮೇಜಿನ ಪರಿಷತ್ತು) ಇಂಗ್ಲೆಂಡಿಗೆ ಹೋಗಿ ಬಂದರು. ವಿಶಾಲ ಲೋಕಾನುಭವವುಳ್ಳವರು. ಅವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಸಂಪೂರ್ಣ ಆಶೀರ್ವಾದಕ್ಕೆ ಪಾತ್ರರಾಗಿದ್ದರು. ೧೯೨೭ರಲ್ಲಿ ಗಾಂಧೀಜಿಯವರನ್ನು ಬೆಂಗಳೂರಿಗೆ ಬರಮಾಡಿಕೊಂಡು ನಂದಿಬೆಟ್ಟದಲ್ಲಿಳಿಸಿ ರಾಜ್ಯದ ಅತಿಥಿಗಳನ್ನಾಗಿ ಗೌರವಿಸಿ ಸತ್ಕರಿಸಿದರು. ಮಿರ್ಜಾರವರ ಸೌಜನ್ಯ, ವಿನಯಶೀಲತೆ, ಶ್ರೀಮನ್‌ಮಹಾರಾಜರ ಅಭಿಮಾನ ಅವರ ರಾಜಗಾಂಭೀರ್ಯ ಗುಣಕ್ಕೆ ಮಹಾತ್ಮ ಗಾಂಧೀಜಿಯವರು ಮಾರು ಹೋಗಿದ್ದರು. ಮೈಸೂರು ರಾಜ್ಯವನ್ನು ರಾಮರಾಜ್ಯವೆಂದು ಕರೆದರು.

ಈ ಸಂದರ್ಭದಲ್ಲಿ ಮೈಸೂರಿನ ಕೀರ್ತಿಯು ಸಮಗ್ರ ಭಾರತದಲ್ಲಿ ಬೆಳಗಿತು. ಈ ಕಾಲದಲ್ಲಿ ಇಂಗ್ಲಿಷರ ದಬ್ಬಾಳಿಕೆ ಅಧಿಕವಾಗಿದ್ದರೂ ಸರ್ ಮಿರ್ಜಾರವರು ತೋರಿದ ಧೈರ್ಯವು ನಿಜಕ್ಕೂ ಶ್ಲಾಘನೀಯವಾದುದು. ಇದರ ಫಲವಾಗಿ ಮೈಸೂರು ರಾಜ್ಯದಲ್ಲಿ ಖಾದಿ ಪ್ರಚಾರ, ಸ್ವದೇಶಿ ಪ್ರಚಾರ, ಚರಕ ಪ್ರಚಾರ, ಹರಿಜನೋದ್ಧಾರ, ಮದ್ಯಪಾನ ನಿಷೇಧ ಮೊದಲಾದ ಕಾರ್ಯಗಳಿಗೆ ಒಳ್ಳೆಯ ಬೆಂಬಲ ದೊರೆಯಿತು. ಸರ್ ಮಿರ್ಜಾರವರ ಆತ್ಮೀಯರಲ್ಲಿ ಈ ರಾಜ್ಯದಲ್ಲಿ ಬೇಕಾಗಿದ್ದ ಹಲ ಕೆಲವು ಜನರಲ್ಲಿ ನಾನೂ ಒಬ್ಬನಾಗಿದ್ದೆನು".



೧೯೨೭ ಜುಲೈ ೧೪ರ ದಿನ ನಸುಕಿನಲ್ಲಿ ಗಾಂಧೀಜಿಯವರ ಜೊತೆ ೧೬ ಜನರ ಒಂದು ತಂಡ ತುಮಕೂರಿಗೆ ಹೊರಟಿತ್ತು. ಕಸ್ತೂರಬಾ ಗಾಂಧಿ, ಗಂಗಾಧರರಾಯರು, ಮಹದೇವ ದೇಸಾಯಿ, ಮಣಿಬಹನ್ ಪಟೇಲ್, ದೇವದಾಸ್, ಮೃದುಲಾ, ಸಾರಾಭಾಯಿ ಇವರು ಆ ತಂಡದಲ್ಲಿ ಇದ್ದರು. ಮೈಸೂರು ಸರಕಾರ ಗಾಂಧೀಜಿ ಬಳಿಗೆ ಒಂದು ಮೋಟಾರನ್ನು ಬಿಟ್ಟಿತ್ತು. ಇನ್ನೂ ಮೂರು ಕಾರು ಬೇಕಾಯಿತು. ಈ ತಂಡಕ್ಕೆ ದಿವಂಗತ ನ್ಯಾಯಮೂರ್ತಿ ಶಂಕರನಾರಾಯಣರಾಯರು, ದಿ. ಜಹರುದ್ದೀನ್ ಮೆಕ್ಕೆ ಅವರು, ಕೆ. ಎಚ್. ರಾಮಯ್ಯನವರು ತಮ್ಮ ಮೋಟಾರುಗಳನ್ನು ಈ ಪ್ರವಾಸಕ್ಕೆ ಕೊಟ್ಟರು.

ದಾರಿ ಉದ್ದಕ್ಕೂ ಸಾವಿರಾರು ಜನ ಸ್ನಾನ ಮಾಡಿ ಸ್ವಚ್ಛವಾದ ಮಡಿಬಟ್ಟೆ ಉಟ್ಟು ಗಾಂಧೀಜಿ ದರ್ಶನಕ್ಕಾಗಿ ತಮ್ಮ ತಮ್ಮ ಹಳ್ಳಿಗಳ ಮುಂದೆ ಕಾದಿರುತ್ತಿದ್ದರು. ಗಾಂಧೀಜಿಗೆ ಹೂವು ಹಣ್ಣು ಕಾಯಿ ಸಮರ್ಪಿಸಿ ಕೃತಾರ್ಥರಾದೆವು ಎಂದುಕೊಳ್ಳುತ್ತಿದ್ದರು.

ತುಮಕೂರಿನಲ್ಲಿ ಸ್ಥಳೀಯ ಸ್ವಾಗತ ಸಮಿತಿಯ ಮುಖಂಡರಾದ ಶ್ರೀ ಕೆ. ರಂಗಯ್ಯಂಗಾರ್ಯರೂ ಜಿಲ್ಲಾಧಿಕಾರಿಗಳೂ ಊರ ಹೊರಗೆ ಕಾದು ನಿಂತಿದ್ದು, ಗಾಂಧೀಜಿಯನ್ನು ಸ್ವಾಗತಿಸಿದರು. ಎಲ್ಲಾ ಸ್ವಾಗತ ಸಮಿತಿಗಳೂ ಒಂದೇ ಸಭೆ ಮಾಡಿ, ಪದೇ ಪದೇ ಅದೇ ಜನರಿಗೆ ಗಾಂಧೀಜಿ ಮಾತಾಡುವಂತೆ ಮಾಡಬೇಡಿ ಎಂದು ತಿಳಿಸಿದ್ದರೂ ತುಮಕೂರಿನಲ್ಲಿ ಮೂರು ಸಭೆಗಳಾದವು. ತುಮಕೂರಿನ ಪೌರಸಭೆ ಒಂದು ಬಿನ್ನವತ್ತಳೆ ಕೊಟ್ಟಿತು. ಗಾಂಧೀಜಿ ಅದಕ್ಕೆ ಉತ್ತರ ಕೊಡುತ್ತ ಪುರಸಭೆ ಪ್ರತಿನಿಧಿಗಳಿಗೆ ಊರಿನ ಮಕ್ಕಳಿಗೆ ಶುದ್ಧವಾದ ನೀರನ್ನೂ, ಅಗ್ಗವಾದ ಹಾಲನ್ನೂ ಸರಬರಾಜು ಮಾಡುವಂತೆ ಭರವಸೆ ಕೊಡಲು ಹೇಳಿದರು.

ನೀರನ್ನೂ ವಿದ್ಯುತ್ತನ್ನೂ ಒದಗಿಸಿದರೆ ಸಾಲದು, ನೀರಿನಷ್ಟೇ ಸುಲಭವಾಗಿ ಜನರಿಗೆ ಹಾಲು ಸಿಗುವಂತೆ ಒಂದು ಗೋಶಾಲೆಯನ್ನು ನಡೆಸಬೇಕೆಂದು ಹೇಳಿದರು. ಪುರಸಭೆಯವರು ಆರೋಗ್ಯವಂತ ಸನ್ನಿವೇಶವನ್ನು ಉಂಟು ಮಾಡುವಂತೆ ಒತ್ತಿ ಹೇಳಿ ಹರಿಜನರು ಹೆಂಡ ಕುಡಿಯುವುದನ್ನೂ ಗೋಮಾಂಸ ಭಕ್ಷಣವನ್ನೂ ಬಿಡಬೇಕೆಂದು ಹೇಳಿದರು.

"ನೀವೇ ಸ್ವತಃ ಕೈಯಲ್ಲಿ ಪೊರಕೆ ಬಕೆಟ್ಟುಗಳನ್ನು ಹಿಡಿಯದೆ ಈ ಊರು ಸ್ವಚ್ಛವಾಗದು. ಮೈಸೂರು ರಾಜ್ಯದಲ್ಲಿ ಜನ ಸೋಮಾರಿಗಳಂತೆ,

ಏಳು ಗಂಟೆಯಾದರೂ ಬೆಳಗ್ಗೆ ಹಾಸಿಗೆ ಬಿಟ್ಟು ಏಳರಂತೆ. ಇದು ಕೂಡದು. ನೀವು ಉದ್ಯೋಗಶೀಲರಾಗಬೇಕು. ನಿಮ್ಮ ಮುಂದೆ ನಾನು ಇಡುತ್ತಿರುವ ರಾಟೆಯು ಉದ್ಯೋಗ ಮತ್ತು ಚಟುವಟಿಕೆಯ ಕುರುಹು. ಸೋಮಾರಿಗಳಿಂದ ರಾಟೆ ಕೆಲಸ ನಡೆಯದು. ನಿಜವಾಗಿ ಕಾಲ ಅಂದರೆ ಧನ. ಗೀತೆಯಲ್ಲಿ ಹೇಳುವುದಿಲ್ಲವೇ, ಸರ್ವನಾಶಕವಾದ ಕಾಲಪುರುಷ ಸೋಮಾರಿಗಳನ್ನು ನಾಶ ಮಾಡುತ್ತಾನೆಂದು.

ತುಮಕೂರಿನ ಚಿಕ್ಕಪುಟ್ಟ ಸಭೆಗಳಲ್ಲಿ ಕಂಡುಬಂದ ನಿಶ್ಶಬ್ದ ವ್ಯವಸ್ಥೆ ಬಹಳ ಚೆನ್ನಾಗಿತ್ತು. ತುಮಕೂರಿನಲ್ಲಿ ಬೇಕಾದಷ್ಟು ಜನ ಖಾದಿ ತೊಟ್ಟಿದ್ದರು. ಆದರೆ ಆ ಸಮಯಕ್ಕೆ ಮಾತ್ರ. ಇದನ್ನು ಬಹಿರಂಗವಾಗಿ ಅವರು ಒಪ್ಪಿಕೊಂಡಿದ್ದರಿಂದ ಇದು ಒಂದು ದೋಷವಾಗಲಿಲ್ಲ. ಅವರಲ್ಲಿ ಕೆಲವರು ನಿರಂತರ ಖಾದಿಧಾರಿಗಳು. ತುಮಕೂರಿನ ನಾಗರಿಕರು ೨,೨೫೦ ರೂಪಾಯಿಗಳನ್ನೂ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಕೂಡಿ ೨೫೦ ರೂಪಾಯಿಗಳನ್ನೂ ಗೋಸಂರಕ್ಷಣೆಗಾಗಿ ಪ್ರಾಣಿದಯಾ ಸಂಘದವರು ೨೦೦ ರೂಪಾಯಿ ನಿಧಿಯನ್ನೂ ಅರ್ಪಿಸಿದರು.

ತುಮಕೂರಿನಲ್ಲಿ ಒಂದು ಆದಿಕರ್ನಾಟಕ ವಸತಿ. ಅಲ್ಲಿ ಒಂದು ಔದ್ಯೋಗಿಕ ವಸತಿ ಶಿಕ್ಷಣ ಶಾಲೆ ಇತ್ತು. ಅಲ್ಲಿ ಹೋಗಿ ಗಾಂಧೀಜಿ ಅದನ್ನು ನೋಡಿಬಂದರು. ಅವರ ಅಡಿಗೆ ಮನೆ, ಊಟದ ಮನೆ, ಪಾಯಖಾನೆಗಳು ಎಲ್ಲವನ್ನೂ ನೋಡಿ ಬಂದು ಅವರ ಸ್ವಚ್ಛತೆಯನ್ನು ಕೊಂಡಾಡಿದರು. ಅಲ್ಲಿ ಮಾಡಿದ ರಾಗಿ ರೊಟ್ಟಿ ಕೆಲವನ್ನು ತೆಗೆದುಕೊಂಡು ಬಂದು ಊಟದ ಹೊತ್ತಿನಲ್ಲಿ ಸ್ವಾಗತ ಸಮಿತಿಯ ಸದಸ್ಯರಿಗೆ ಬಡಿಸುವಂತೆ ಕೇಂದ್ರ ಸಮಿತಿಯ ಕಾರ್ಯದರ್ಶಿಗೆ ಹೇಳಿದರು. ಸದಸ್ಯರಿಗೆ ಇದರಿಂದ ತುಂಬ ಕಿರುಕುಳ ಎನಿಸಿತು. ಅನಿವಾರ್ಯವಾಗಿ ಕೆಲವರು ಬಡಿಸಿಕೊಂಡು ಊಟ ಮಾಡಿದರು. ಆಮೇಲೆ ಪ್ರಾಯಶ್ಚಿತ್ತ ಮಾಡಿಕೊಂಡರೋ ಏನೋ!

ತುಮಕೂರಿನಲ್ಲಿ ಗಾಂಧೀಜಿ ಪೌರಸಭೆಯ ಬಿನ್ನವತ್ತಳೆಗೆ ಉತ್ತರ ಕೊಡುತ್ತ ದೀರ್ಘವಾಗಿ ಭಾಷಣ ಮಾಡಿ ಗೋ ರಕ್ಷಣೆಯ ಮಹತ್ವವನ್ನೂ, ಅಗ್ಗದ ಹಾಲಿನ ಸರಬರಾಜಿನ ಅಗತ್ಯವನ್ನೂ ಒತ್ತಿ ಹೇಳಿದರು. ನೀರಿನ ಸರಬರಾಜಿಗೆ ಮೂರು ಲಕ್ಷ ರೂಪಾಯಿ ವೆಚ್ಚ ಮಾಡಿದ್ದನ್ನು ಪುರಸಭೆಯು ಬಿನ್ನವತ್ತಳೆಯಲ್ಲಿ



ಹೇಳಿತ್ತು. ಬಹಳ ಕಡಿಮೆ ಹಣದಲ್ಲಿ ಒಂದು ಕ್ಷೀರಕ್ಷೇತ್ರವನ್ನು ಏರ್ಪಡಿಸಬಹುದೆಂದು ಗಾಂಧೀಜಿ ಹೇಳಿದರು. ಪಶ್ಚಿಮದವರನ್ನು ಎಷ್ಟೇ ನಿಂದನೆ ಮಾಡಿದರೂ ಅವರ ಸ್ವಚ್ಛತೆ ಅನುಕರಣೀಯ ಎಂದು ಹೇಳಿದರು. ಅಸ್ವಚ್ಛತೆಗೆ ಸಾಕ್ಷಿ ಎಂದರೆ ನಮ್ಮ ಕಕ್ಕಸುಗಳ ಸ್ಥಿತಿ. ನಮ್ಮ ಕಕ್ಕಸುಗಳು ಬಹಳ ಘೋರ ಸ್ಥಿತಿಯಲ್ಲಿವೆ. ಅವನ್ನು ಸರಿಮಾಡಿಕೊಳ್ಳದೆ ಶುಚಿ ಸಾಧ್ಯವಿಲ್ಲ ಎಂದರು. ಮರುದಿನ ಮಧುಗಿರಿ, ಕೊರಟಗೆರೆಗೆ ಗಾಂಧೀಜಿ ಹೋಗಿ ಬಂದರು. ಮಧುಗಿರಿಯಲ್ಲಿ ಒಂದು ಸಾವಿರ ರೂಪಾಯಿ ದರಿದ್ರ ನಾರಾಯಣನ ನಿಧಿಗೆ ಕೊಟ್ಟರು. ಅಲ್ಲಿಂದ ಕೊರಟಗೆರೆಯಲ್ಲಿ ನೂರು ರೂಪಾಯಿ, ಹಾದಿಯ ಒಂದು ಹಳ್ಳಿಯಲ್ಲಿ ಮೂವತ್ತು ರೂಪಾಯಿ ಕೊಟ್ಟರು. ಹೀಗೆ ಗಾಂಧೀಜಿ ತುಮಕೂರು ಜಿಲ್ಲೆಗೆ ಭೇಟಿ ಕೊಟ್ಟಾಗ ಮಧುಗಿರಿಗೆ ಭೇಟಿ ನೀಡಿದ್ದು ದಾಖಲಾಗಿದೆ.

೧೯೩೪ರಲ್ಲಿ ತುಮಕೂರಿಗೆ ಮತ್ತೊಮ್ಮೆ ದಯಮಾಡಿಸಿದರು. ಬೆಂಗಳೂರು ಯಲಹಂಕದ ಹೆಂಚಿನ ಕಾರ್ಖಾನೆಯ ಶ್ರೀ ವೇಣುಗೋಪಾಲ ಮೊದಲಿಯಾರರ ಮೋಟಾರಿನಲ್ಲಿ ಗಾಂಧೀಜಿ ತುಮಕೂರಿಗೆ ಹೋದರು. ದೊಡ್ಡಬಳ್ಳಾಪುರಕ್ಕೆ ಬಾರದಿದ್ದ ಮೀರಾಬೆನ್, ಜಮುನಾಲಾಲ್ ಬಜಾರರ ಇಬ್ಬರು ಹೆಣ್ಣುಮಕ್ಕಳು, ದಾಮೋದರ ದಾಸ ಮುಂದಡಾ, ಮಾಗುಂಟೆ ಬಾಸಿನೀಡು, ಬ್ರಹ್ಮಚಾರಿ ರಾಮಚಂದ್ರ ಇವರೂ ತುಮಕೂರಿಗೆ ಬಂದು ಸೇರಿಕೊಂಡರು. ತುಮಕೂರಿನಲ್ಲಿ ಮಧ್ಯಾಹ್ನ ಎರಡೂವರೆ ಗಂಟೆ ಹೊತ್ತಿಗೆ ಸಭೆ ನಡೆಯಿತು. ಆ ಸಂದರ್ಭಕ್ಕಾಗಿ ಕಟ್ಟಿದ ವೇದಿಕೆಯ ಮೇಲೆ ಗಾಂಧೀಜಿ ಆಸೀನರಾದರು. ತುಮಕೂರಿನ ಬೇರೆ ಬೇರೆ ಸಮಾಜಗಳವರು ಬಿನ್ನವತ್ತಳೆಗಳನ್ನು ಓದಿ, ಸಾರ್ವಜನಿಕರ ಪರವಾಗಿ ೧೦೦೦ ರೂಪಾಯಿಗಳ ನಿಧಿಯನ್ನು ಕೊಟ್ಟರು. ಗಾಂಧೀಜಿ ಮಾತನಾಡಿ ಸಾರ್ವಜನಿಕರನ್ನು ಅಭಿನಂದಿಸಿದರು. ಪ್ರತಿಯೊಬ್ಬರೂ ಈ ಅಸ್ಪೃಶ್ಯತೆ ನಿವಾರಣೆಯ ಚಳುವಳಿಯಲ್ಲಿ ಭಾಗವಹಿಸಬೇಕೆಂದು ಪ್ರಾರ್ಥಿಸಿದರು. ಮಧ್ಯಾಹ್ನ ೩–೧೫ ಗಂಟೆಗೆ ಗಾಂಧೀಜಿ ಬೆಂಗಳೂರಿಗೆ ಹೊರಟರು. ದಾರಿಯಲ್ಲಿ ಕ್ಯಾತಸಂದ್ರದ ಬಳಿ ಸಾರ್ವಜನಿಕರು ಅವರನ್ನು ತಡೆದು ಒಂದು ನಿಧಿಯನ್ನು ಸಮರ್ಪಿಸಿದರು. ಸುಮಾರು ೪–೩೦ರ ವೇಳೆಗೆ ಬೆಂಗಳೂರಿನ ಯಶವಂತಪುರಕ್ಕೆ ಬಂದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ತುಮಕೂರು ಜಿಲ್ಲೆ ಮಹತ್ವದ ಪಾತ್ರ ವಹಿಸಿತ್ತು. ೧೯೩೮ರಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಜೀವಂತ ಸತ್ಯಾಗ್ರಹದಲ್ಲಿ

ಸಾವಿರಾರು ರೈತರು ಪಾಲುಗೊಂಡು ನೂರಾರು ಜನ ಜೈಲು ಕಂಡರು. ಕ್ವಿಟ್ ಇಂಡಿಯಾ ಚಳುವಳಿಯಲ್ಲೂ ರೈತರು, ವಿದ್ಯಾರ್ಥಿಗಳು ಮಹತ್ವದ ಪಾತ್ರವಹಿಸಿದರು.

ಅಸಹಕಾರ ಚಳುವಳಿಯ ಕಾಲದಲ್ಲೇ ತುಮಕೂರು, ಮಧುಗಿರಿಗಳು, ೧೯೨೧–೨೨, ಕಾಂಗ್ರೆಸ್ಸಿನ ಚಟುವಟಿಕೆಯ ಕೇಂದ್ರಗಳಾಗಿದ್ದವು. ಆದರೆ ೧೯೩೮ರ ವರೆಗೂ ಸಂಸ್ಥಾನಿ ಪ್ರದೇಶಗಳಲ್ಲಿ ಯಾವುದೇ ಕಾನೂನುಭಂಗ ಚಳುವಳಿ ನಡೆಯಲಿಲ್ಲ. ೧೯೩೭–೩೮ರಲ್ಲಿ ಆರಂಭವಾದ ಚಳುವಳಿ ಜವಾಬ್ದಾರಿ ಸರಕಾರಕ್ಕಾಗಿ ಇತ್ತು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಸ್ವಾತಂತ್ರ್ಯಕ್ಕಾಗಿ ನಡೆದ ಸ್ಥಿರ ಚಳುವಳಿ ಆಗಿತ್ತು.

೧೯೨೦ರ ಪರಿಸರದಲ್ಲಿ ತುಮಕೂರಿನಲ್ಲಿ ಕಡಬಾ ರಂಗಯ್ಯಂಗಾರ್, ಸೆಟ್ಲೂರು ವಕೀಲರು, ಗಣ್ಯ ಕಾಂಗ್ರೆಸಿಗರು, ೧೯೨೨ರಲ್ಲಿ ರಂಗಯ್ಯಂಗಾರರು ಗಯಾ ಕಾಂಗ್ರೆಸ್ಸಿಗೆ ಹೋಗಿದ್ದರು. 'ಮೈಸೂರು ಕ್ರಾನಿಕಲ್' ಇಂಗ್ಲಿಷ್ ಪತ್ರಿಕೆ ಹೊರಡಿಸುತ್ತಿದ್ದರು. ಈ ಕಾಲಕ್ಕೆ ಕೀರ್ತನಕಾರ ಜಯರಾಮಾಚಾರ್ಯ ಕೊಪ್ಪಳರು ತುಮಕೂರು, ಮಧುಗಿರಿಗಳಲ್ಲಿ ಜನಜಾಗೃತಿ ಮಾಡಿದರು. ೧೯೨೧–೨೨ರಲ್ಲಿ ಈ ಕೀರ್ತನಕಾರರ ಪ್ರೇರಣೆಯಿಂದ ಮಧುಗಿರಿಯಲ್ಲಿ ಟಿಳಕರ ಸ್ಮಾರಕವಾಗಿ ಒಂದು ಸಭಾಭವನವನ್ನು ಕಟ್ಟಿದ್ದರು. ತುಮಕೂರಿನ ಇನ್ನೊಬ್ಬ ಗಣ್ಯ ನಾಯಕರೆಂದರೆ ತಾಳಕೆರೆ ಸುಬ್ರಹ್ಮಣ್ಯ ಅವರು. ೧೯೨೦ರಲ್ಲಿ ಟಿಳಕರ ನಿಧನಕ್ಕಾಗಿ ತುಮಕೂರಿನಲ್ಲಿ ನಾಟಕದ ಥಿಯೇಟರಿನಲ್ಲಿ ಸಂತಾಪ ಸಭೆ ನಡೆಯಿತು.

ತುಮಕೂರಿನಲ್ಲಿ ೧೯೨೭ರಲ್ಲಿ ಡಾ. ಹರ್ಡೀಕರರು ಸೇವಾದಳದ ಶಿಬಿರವೊಂದನ್ನು ನಡೆಸಿದರು. ಯುಸೂಫ್ ಮೆಹರಾಲಿಯವರು ಮುಂಬಯಿ ಯಿಂದಲೂ ಶ್ರೀನಿವಾಸ ಮೇಗಾರರು ಚನ್ನೈಯಿಂದಲೂ ಈ ಶಿಬಿರಕ್ಕೆ ಬಂದು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತಾಡಿದರು. ಬೆಳಗಾವಿಯಲ್ಲಿ ೧೯೨೪ರಲ್ಲಿ ಜರುಗಿದ ೩೯ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಜಿಲ್ಲೆಯಿಂದ ಹಲವರು ತೆರಳಿದ್ದರು. ಅವರಲ್ಲಿ ರಂಗಯ್ಯಂಗಾರರು ಪ್ರಮುಖರು.

೧೯೨೯ರಲ್ಲಿ ಗಾಂಧೀ ಹುಟ್ಟುಹಬ್ಬದಂದು ಎಂ. ನೀಲಕಂಠರಾಯರು ಸಂಚಾಲಕರಾಗಿ ಖಾದಿ ಭಂಡಾರ ತೆರೆಯುವಂತಾಯಿತು. ಈ ಖಾದಿ ಭಂಡಾರ ರಾಷ್ಟ್ರೀಯ ಚಟುವಟಿಕೆಯ ಗಣ್ಯಕೇಂದ್ರವಾಗಿತ್ತು.



೧೯೩೦–೩೧ರ ಹೊತ್ತಿಗೆ ಜಿಲ್ಲೆಯ ಎಲ್ಲಾ ಪ್ರಮುಖ ಕೇಂದ್ರಗಳಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಗಳು ಪ್ರಾರಂಭವಾಗಿದ್ದವು. ತುಮಕೂರಿನಲ್ಲಿ ಎಂ.ವಿ. ರಾಮರಾವ್, ಬಿ. ಸಿ. ನಂಜುಂಡಯ್ಯ ಮುಂತಾದ ಕಾರ್ಯಕರ್ತರು ಮುಂದಾದರು. ಅಂಕೋಲ ಉಪ್ಪಿನ ಸತ್ಯಾಗ್ರಹ ಹಾಗೂ ಮುಂಬೈ ಕರ್ನಾಟಕದಲ್ಲಿ ಆದ ಕಾನೂನುಭಂಗ ಚಳುವಳಿಗೆ ಟಿ. ಎಲ್. ಸಂಗಣ್ಣ, ಟಿ. ಎನ್. ಚನ್ನಪ್ಪ, ಪುಟ್ಟಯ್ಯ, ವಜ್ರಂಶೆಟ್ಟಿ ಮುಂತಾದ ೭–೮ ಜನ ತೆರಳಿದರು. ಇವರಲ್ಲಿ ಕೆಲವರಿಗೆ ಅಲ್ಲಿ ಶಿಕ್ಷೆ ಆಯಿತು. (೧೯೩೦–೩೧).

೧೯೩೧ರ ಅಕ್ಟೋಬರ್‌ನಲ್ಲಿ ತುಮಕೂರಿನಲ್ಲಿ ಪಾನನಿರೋಧ ಚಳುವಳಿ ಆಯಿತು. ದಿನಕ್ಕೆ ನಾಲ್ವರಂತೆ ೧೨೦ ಜನ ಈ ಚಳುವಳಿಯಲ್ಲಿ ಪಾಲುಗೊಂಡರು. ರಂಗಯ್ಯಂಗಾರ್, ತಾಳಕೆರೆ ಸುಬ್ರಹ್ಮಣ್ಯ, ಬಿ. ಸಿ. ನಂಜುಂಡಯ್ಯ, ಎಂ. ಎಸ್. ವಿಠೋಬರಾವ್, ಎ.ರೇವಣ್ಣ ಇವರು ಈ ಚಳುವಳಿಯಲ್ಲಿ ಮುಖ್ಯರು. ಅನೇಕರ ಬಂಧನವಾಗಿ ತಲಾ ಎರಡು ತಿಂಗಳು ಶಿಕ್ಷೆಯೂ ಅನೇಕರಿಗೆ ಆಯಿತು. ಗುಬ್ಬಿ ರಾಜಗೋಪಾಲಾಚಾರ್, ಹೇರೂರು ವೆಂಕಟರಾಮಯ್ಯ ಇವರಲ್ಲಿ ಸೇರಿದ್ದರು. ಆ ಕಾಲದಲ್ಲಿ ಇತರ ಕಡೆ ಕೂಡ ಚಳುವಳಿ ಆರಂಭವಾಯಿತು. ಕುಣಿಗಲ್‌ನಲ್ಲಿ ಕೆ.ವಿ.ಸುಬ್ರಹ್ಮಣ್ಯಸ್ವಾಮಿ ಮುಖ್ಯರು. ಇಟಕದಿಬ್ಬನಹಳ್ಳಿ, ಮಿಡಿಗೇಶಿ, ಪಾವಗಡಗಳಲ್ಲಿ ಖಾದಿ ಉದ್ಘಾಟನಾ ಕೇಂದ್ರ ಆರಂಭವಾದವು.

ಮಧುಗಿರಿಯು ಜಿಲ್ಲೆಯಲ್ಲಿ ಗಣ್ಯಕೇಂದ್ರ. ಎಸ್. ನಂಜಯ್ಯಶೆಟ್ಟಿ, ಕೆ.ಎನ್.ಸಿದ್ಧರಾಮಶೆಟ್ಟಿ, ವಕೀಲ ಶಾಮಶಾಸ್ತ್ರಿ, ಕೆ. ಎ. ಎನ್. ಈಶ್ವರಶೆಟ್ಟಿ, ಎಂ. ಡಿ. ವೆಂಕಟಸುಬ್ಬಯ್ಯ ಇಲ್ಲಿ ಆರಂಭದ ಗಣ್ಯ ನಾಯಕರು, ಮುಂದೆ ಟಿ. ತಾರೇಗೌಡ, ಮಾಲಿ ಮರಿಯಪ್ಪ ಹಾಗೂ ೧೯೩೭ರಲ್ಲಿ ಪ್ರಜಾಪಕ್ಷ ತ್ಯಜಿಸಿ ಕಾಂಗ್ರೆಸ್ ಸೇರಿದ ಕೆ. ಜಿ. ಚೇರಪ್ಪ ಇಲ್ಲಿನ ಪ್ರಮುಖರು.

ಕೊರಟಗೆರೆಯಲ್ಲಿ ನಂಜುಂಡಯ್ಯ, ರಾಜಶೇಖರಪ್ಪ, ಮೊಗ್ಗನಹಳ್ಳಿ ದೊಡ್ಡಯ್ಯ ಇವರೆಲ್ಲ ಆರಂಭದ ನಾಯಕರು. ಈ ತಾಲ್ಲೂಕಿನ ಪುರವು ಒಂದು ಮುಖ್ಯ ಕೇಂದ್ರವಾಗಿತ್ತು. ಆರ್. ಚನ್ನಿಗರಾಮಯ್ಯ ಮುಂದೆ ಚಳುವಳಿ ಸೇರಿದರು. ಕುಣಿಗಲ್‌ನಲ್ಲಿ ಕೆ. ವಿ. ಸುಬ್ರಹ್ಮಣ್ಯಸ್ವಾಮಿ ೧೯೩೪ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾದರು. ಗೋವಿಂದಶೆಟ್ಟಿ, ಲಕ್ಷ್ಮಯ್ಯರೆಡ್ಡಿ ಈ ಊರ ಇತರ ಗಣ್ಯರು.

ಪಾವಗಡದಲ್ಲಿ ಇದ್ದ ಖ್ಯಾತ ವಿದ್ವಾಂಸ ಡಿ. ಎಲ್. ನರಸಿಂಹಾಚಾರ್ ಆರಂಭದಲ್ಲಿ ರಾಷ್ಟ್ರೀಯ ಚಳುವಳಿಯ ಗಣ್ಯಧಾರರು. ೧೯೩೦ರಲ್ಲಿ ಇಲ್ಲಿ ಉಮಾಬಾಯಿ ಕುಂದಾಪುರ ಅವರ ಭಾಷಣವಾಗಿತ್ತು. ಕೆ. ನಂಜುಂಡರಾವ್ ಅಲ್ಲಿನ ಗಣ್ಯಕಾರ್ಯಕರ್ತರು. ಇವಲ್ಲರದೆ ಜಾಲಪ್ಪ ನಾಯಕ, ಅಣ್ಣಯ್ಯ, ಜಿ. ನಾರಾಯಣರೆಡ್ಡಿ ಊರ ಮುಖ್ಯ ಕಾರ್ಯಕರ್ತರು. ವೈ. ಎನ್. ಹೊಸಕೋಟೆಯಲ್ಲಿ ವೆಂಕಟೇಶ ಗುಪ್ತ ಮುಖ್ಯರು. ಪಿ. ರಾಮರಾವ್, ಎಂ. ನಾಗರತ್ನ ರೆಡ್ಡಿ, ಎ.ಎನ್.ರೆಡ್ಡಿ (ವೆಂಕಟಾಪುರ) ಡಿ. ಗೋವಿಂದಪ್ಪ, ಹೊಸಕೋಟೆಯ ಗಿರಿಯಪ್ಪ ತಾಲ್ಲೂಕಿನ ಇತರ ಕಾರ್ಯಕರ್ತರು. ಬಸವರಾಜಪ್ಪ, ಪೋತರೆಡ್ಡಿ, ಸಂಜೀವರೆಡ್ಡಿ, ಸುಬ್ಬಣ್ಣಾಚಾರ್, ಗರುಡಾಚಾರ್ ತಾಲ್ಲೂಕಿನ ಇತರ ಮುಖ್ಯರು. ಶಿರಾ ತಾಲ್ಲೂಕಿನಲ್ಲಿ ಕೆ. ಸಿ. ಚನ್ನಬಸವಯ್ಯ ೧೯೩೭ರಲ್ಲಿ ಡಿ.ಸಿ.ಸಿ. ಅಧ್ಯಕ್ಷರಾದರು. ಎ. ಗುಂಡೂರಾವ್ ಮತ್ತು ಕೆಂಚಣ್ಣ ಕಾರ್ಯದರ್ಶಿಗಳಾದರು. ಸಿದ್ಧಪ್ಪ, ಕರಿಬಸಪ್ಪ, ನಾಗವಲ್ಲಿಯ ಮೂಡಲಗಿರಿಗೌಡ ಈ ತಾಲ್ಲೂಕಿನ ಇತರ ಗಣ್ಯರು.

೧೯೧೭ರಲ್ಲಿ ಆರಂಭವಾದ ಪ್ರಜಾಪಿತ್ಯ ಮಂಡಳಿ, ೧೯೩೦ರಲ್ಲಿ ಆರಂಭವಾದ ಪ್ರಜಾಪಕ್ಷ ಇವು ೧೯೩೪ರಲ್ಲಿ ಒಂದಾಗಿ ಸಂಯುಕ್ತ ಪ್ರಜಾಪಕ್ಷ ಎಂಬ ಸಂಸ್ಥೆ ರೂಪು ತಾಳಿತು. ೧೯೩೭ರಲ್ಲಿ ಈ ಸಂಸ್ಥೆ ಕಾಂಗ್ರೆಸ್ಸಿನಲ್ಲಿ ಲೀನವಾಗಿ ಮೈಸೂರು ಕಾಂಗ್ರೆಸ್ ಹುಟ್ಟಿತು. ಒಂದೇ ಜಾತಿಗೆ ಸೇರಿದವರ ಸಂಸ್ಥೆ ಎಂಬ ಕಾಂಗ್ರೆಸ್ಸಿನ ಬಗ್ಗೆ ಇದ್ದ ಆಪಾದನೆ ಈಗ ದೂರವಾಗಿ ಕಾಂಗ್ರೆಸ್ ಸಮಾಜವ್ಯಾಪಿ ಆಯಿತು. ಇದರ ಪ್ರಥಮಾಧಿವೇಶನ ೧೯೩೮ರ ಏಪ್ರಿಲ್‌ನಲ್ಲಿ ಮದ್ದೂರ ಬಳಿ ಶಿವಪುರದಲ್ಲಿ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಆಯಿತು. ತ್ರಿವರ್ಣ ಧ್ವಜ ಹಾರಿಸಬಾರದೆಂಬ ಪ್ರತಿಬಂಧಕಾಜ್ಞೆ ಭಂಗಿಸಿ ಅಲ್ಲಿ ನಿತ್ಯ ಬಂಧನಗಳಾದವು. ಸಂಸ್ಥಾನದ ಎಲ್ಲೆಡೆ ಈ ಪ್ರತಿಬಂಧ ಮುರಿದು ಧ್ವಜಸತ್ಯಾಗ್ರಹ ನಡೆಸಲು ಕರೆಕೊಟ್ಟರು. ತುಮಕೂರಿನಲ್ಲೂ ಇತರ ಕಡೆಯಲ್ಲೂ ಧ್ವಜಸತ್ಯಾಗ್ರಹ ನಡೆಸಿ ಅನೇಕರ ಬಂಧನವಾಯಿತು. ಕೊರಟಗೆರೆಯಲ್ಲಿ ಸೋಂಪುರದ ಎಸ್. ಹನುಮಂತರಾಯರ ನೇತೃತ್ವದಲ್ಲಿ ಸತ್ಯಾಗ್ರಹ ಮಾಡಿದ ನಾಲ್ವರ ಬಂಧನವಾಯಿತು. ಮಧುಗಿರಿಯಲ್ಲಿ ರಾಮಚೈತನ್ಯ, ತಾರೇಗೌಡ ಸತ್ಯಾಗ್ರಹ ಶಿಕ್ಷೆ ಅನುಭವಿಸಿದರು. ಶಿರಾದಲ್ಲಿ ಧ್ವಜ ಹಾರಿಸಿ ಬಂಧಿತರಾದರು. ಕರಿಸಿದ್ಧಪ್ಪ, ತುಮಕೂರಿನಲ್ಲಿ ಬಿ. ಸಿ. ನಂಜುಂಡಯ್ಯ ಕೈದಾದರು. ಕುಣಿಗಲ್‌ನಲ್ಲಿ ಸುಬ್ರಹ್ಮಣ್ಯಸ್ವಾಮಿ ಇದೇ ರೀತಿ ಧ್ವಜಸತ್ಯಾಗ್ರಹ ಮಾಡಿದರು. ಅವರ ಜೊತೆ ೧೭ ಜನರ ಬಂಧನವಾಯಿತು.



ಅವರಲ್ಲಿ ಕೆ. ವಿ. ಕೃಷ್ಣಸ್ವಾಮಿ ಸಿ. ಕೆ. ರಂಗಪ್ಪ, ಹುಚ್ಚಣ್ಣ, ಚಿಕ್ಕಣ್ಣ, ಕೆ. ನಂಜಯ್ಯ, ಯಜಮಾನ ಮರಿಯಪ್ಪ, ಸಂಜೀವಯ್ಯ, ಕೃಷ್ಣಶೆಟ್ಟಿ, ವೆಂಕಟೇಶ, ವೆಂಕಟಕೃಷ್ಣ, ಕಾಂತರಾಜ, ಜನಾರ್ದನ, ಕೃಷ್ಣಮೂರ್ತಿ, ಸುಬ್ಬಣ್ಣ, ಮಲ್ಲಯ್ಯ, ಪುಟ್ಟರೇವಣ್ಣ ಇವರೆಲ್ಲ ಸೇರಿದ್ದರು. ಕುಣಿಗಲ್‌ನ ಸಂಖ್ಯೆಯೇ ದೊಡ್ಡದು. ೧೭.೪.೧೯೩೮ರಂದು ಆದ ಈ ಬಂಧನದ ನಂತರ ಕುಣಿಗಲ್‌ನಲ್ಲಿ ಮುಂದೆ ೧೮.೪.೧೯೩೮ರಂದು ೩೩ ಜನರ ಬಂಧನವಾಯಿತು. ಇದರಲ್ಲಿ ಬಿದನಗೆರೆಯ ರಾಮಣ್ಣಗೌಡರು ಇದ್ದರು. ಬಹಳಷ್ಟು ಜನ ಬಸವಗೆರೆ ಊರವರು. ಇವರಿಗೆಲ್ಲಾ ಎರಡು ವಾರದಿಂದ ಆರು ವಾರಗಳವರೆಗೆ ಶಿಕ್ಷೆ ಆಯಿತು.

ಶಿವಪುರ ಸತ್ಯಾಗ್ರಹದ ನಂತರ ಏಪ್ರಿಲ್‌ನಲ್ಲಿ ವಿದುರಾಶ್ವತ್ಥ ದುರಂತ ವಾಯಿತು. ಧ್ವಜ ಸತ್ಯಾಗ್ರಹವನ್ನು ಜಾತ್ರೆಯ ಕಾಲಕ್ಕೆ ನಡೆಸಿದಾಗ ಗೋಳಿಬಾರಾಗಿ ೧೦ ಜನ ಸತ್ತರು. ಇದರಿಂದ ರಾಜ್ಯದಲ್ಲಿ ಅಪೂರ್ವ ಜನಜಾಗೃತಿ ಆಯಿತು. ಎಲ್ಲ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ರೈತ ಸಮ್ಮೇಳನ ನಡೆಯಿತು. ರೈತರ ಸಮಸ್ಯೆಗಳನ್ನು ಎತ್ತಿ ಹೇಳಿತು. ಜವಾಬ್ದಾರಿ ಸರಕಾರಕ್ಕಾಗಿ ಚಳುವಳಿ ನಡೆಸಲಾಯಿತು.

೧೯೩೯ರ ಸೆಪ್ಟಂಬರ್ ೧ ರಂದು ಟಿ. ಸಿದ್ಧಲಿಂಗಯ್ಯ ಮತ್ತು ಕೆ. ಹನುಮಂತಯ್ಯ ತುಮಕೂರಿನಲ್ಲಿ ಬಂಧಿತರಾದರು. ಗ್ರಾಮಾಂತರ ಪ್ರದೇಶಗಳಲ್ಲಿ ಈ ಚಳುವಳಿಯಲ್ಲಿ ನೂರಾರು ರೈತರು ಭಾಗವಹಿಸಿ ಸತ್ಯಾಗ್ರಹ ನಡೆಸಿದರು. ಒಂದು ಲೆಕ್ಕದಂತೆ ೪೭೦ ಜನ ಆಗ ಜಿಲ್ಲೆಯಲ್ಲಿ ಬಂಧಿತರಾಗಿ ಶಿಕ್ಷೆಗೆ ಒಳಗಾದರು. ತಾಲ್ಲೂಕುಗಳಲ್ಲಿ ಸತ್ಯಾಗ್ರಹ ಬಲವಾಗಿತ್ತು. ಅದೇ ವರ್ಷ ತಾಳಕೆರೆ ಸುಬ್ರಹ್ಮಣ್ಯ ಅವರು ರಾಜದ್ರೋಹದ ಆಪಾದನೆ ಎದುರಿಸಿ ಜೈಲು ಕಂಡಿದ್ದರು.

ಶಿರಾ ತಾಲೂಕಿನ ತಾವರೆಕೆರೆ, ಒಡ್ಡನಳ್ಳಿ ಹಾಗೂ ಯಲಿಯೂರುಗಳಲ್ಲಿ ಜಂಗಲ್ ಸತ್ಯಾಗ್ರಹವಾಯಿತು. ಮಾಲಿಮರಿಯಪ್ಪ ತಾವರೆಕೆರೆಯಲ್ಲಿ ಬಂಧಿತರಾದ ಪ್ರಥಮ ಸತ್ಯಾಗ್ರಹಿ ಎಚ್. ಆರ್. ದಾಸೇಗೌಡ, ಬಿ. ಕೆಂಚಣ್ಣ, ತಾವರೆಕೆರೆ ಬಸವಯ್ಯ, ಚಿಕ್ಕಭೈರಪ್ಪ, ಬಾಲಯ್ಯ, ಸಂಜೀವಪ್ಪ, ಗಿರಿಯಪ್ಪ, ಕುಣಿಗಲ್ ಶೇಷಾದ್ರಿ ಅಯ್ಯಂಗಾರ್, ಸಂಪಿಗೆ ರಾಮಸ್ವಾಮಿ ಅಯ್ಯಂಗಾರ್, ಎ.ಡಿ.ಗೋವಿಂದಪ್ಪ, ದ್ವಾರಾಳು ಹನುಮಂತಪ್ಪ, ಕಳ್ಳಂಬೆಳ್ಳದ ವಿ. ಎಂ. ರಾಮೇಗೌಡ, ಹುಣಸೇನಹಳ್ಳಿ ಗೋವಿಂದಪ್ಪ, ಯಲಿಯೂರಿನ ಎ. ಗುಂಡೂರಾವ್, ಸಿದ್ಧಲಿಂಗಪ್ಪ, ವೀರಭದ್ರಯ್ಯ, ಶಿರಾದ ಸಿದ್ದಪ್ಪ ಬಂಧಿತರಾಗಿದ್ದರು.

ಒಡ್ಡನಹಳ್ಳಿಯಲ್ಲಿ ಹೆಂಜಾರಪ್ಪ ಮೊದಲ ಸತ್ಯಾಗ್ರಹಿ. ಕಳ್ಳಂಬೆಳ್ಳದ ಮೂರುಕಣ್ಣಪ್ಪ, ಮಲ್ಲಯ್ಯ, ಕೆಂಚಪ್ಪ, ಕ್ಯಾತಸಂದ್ರದ ಕುಂಡಲಗಿರಿ ಶ್ರೀನಿವಾಸಾಚಾರ್, ಗುಬ್ಬಿಯ ಪುಟ್ಟರೇವಣ್ಣ, ತುಮಕೂರಿನ ಡಿ. ಆರ್. ಮುದ್ದಪ್ಪ, ಚಿಕ್ಕದಾಳವಟ್ಟ ನರಸೇಗೌಡ, ಬೆಲಿನಹಳ್ಳಿ ಕರೇಗೌಡ, ಹುಣಸೇನಹಳ್ಳಿಯ ನರಸಿಂಗಯ್ಯ, ಬಡ್ಡಿಹಳ್ಳಿ ವೆಂಕಟರಾಮಯ್ಯ, ಚಿಕ್ಕಣ್ಣ, ಎಚ್. ಎಂ. ರಾಮಯ್ಯ ಇವರೆಲ್ಲ ಬಂಧಿತರಲ್ಲಿ ಪ್ರಮುಖರು. ಶಿರಾ ತಾಲ್ಲೂಕಿನ ಸತ್ಯಾಗ್ರಹ ಸಂಘಟನೆಗೆ ಚಿಕ್ಕನಾಯಕನಹಳ್ಳಿಯ ಹನುಮಂತರಾವ್, ತುಮಕೂರಿನ ನೀಲಕಂಠರಾವ್, ಎಂ. ಗುಂಡೂರಾವ್, ಎ.ರೇವಣ್ಣ ಇವರೆಲ್ಲ ದುಡಿದು ಬಂಧಿತರಾದರು. ಸಿ. ಜಿ. ಮುಕ್ಕಣ್ಣಪ್ಪ ಕೂಡ ಇಲ್ಲಿ ಬಂಧನಕ್ಕೆ ಒಳಗಾದರು. ಶಿರಾ ಶಿಬಿರ ಒಂದು ತಿಂಗಳು ನಡೆಯಿತು. ತಾವರಕೆರೆಯಲ್ಲಿ ಇದೇ ರೀತಿ ಶಿಬಿರ ನಡೆಯಿತು. ಹಲವು ದಿನ ಉತ್ಸಾಹದ ಸತ್ಯಾಗ್ರಹ ನಡೆಯಿತು. ನೂರಾರು ಜನರಲ್ಲಿ ಕೆಲವರನ್ನು ಮಾತ್ರ ಬಂಧಿಸಲಾಗಿತ್ತು.

ಈ ಕಾಲದಲ್ಲಿ ಆರ್. ಎಸ್. ಆರಾಧ್ಯರು ಗುಪ್ತವಾಗಿ 'ತ್ರಿಶೂಲ', 'ಕ್ರಾಂತಿ', 'ಸಮರ', 'ಕಹಳೆ' ಮುಂತಾದ ಹೆಸರಿನ ಸೈಕ್ಲೋಸ್ಟೈಲ್ ಮಾಡಿದ ಬುಲೆಟಿನ್ ಹೊರಡಿಸುತ್ತಿದ್ದರು. ಎರಡು ತಿಂಗಳ ನಂತರ ಇವರ ಬಂಧನವಾಗಿ ಆರು ತಿಂಗಳ ಶಿಕ್ಷೆ ಆಯಿತು. ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಇವರಿಗೆ ಉಗ್ರ ಶಿಕ್ಷೆ ಆಗಿತ್ತು.

ಶಿರಾ ತಾಲ್ಲೂಕು ತಾವರೆಕೆರೆಯಲ್ಲಿ ಸೋಂಪುರದ ವೀರಶೆಟ್ಟಪ್ಪ, ಉದ್ದಂಡಪ್ಪ, ಚಿಕ್ಕಹನುಮಯ್ಯ, ತಿಮ್ಮಾಬೋವಿ ಹಾಗೂ ಮಾವತ್ತೂರಿನ ಕೆ. ಎಂ. ಶಿವಣ್ಣ ತಾವರೆಕೆರೆಯಲ್ಲಿ ಸತ್ಯಾಗ್ರಹ ಮಾಡಿದ್ದರು. ನೂರಾರು ಜನರನ್ನು ಬಂಧಿಸಿ ವಾಹನದಲ್ಲಿ ತುಂಬಿ ದೂರ ಅರಣ್ಯದಲ್ಲಿ ಪೊಲೀಸರು ಬಿಟ್ಟು ಬರುತ್ತಿದ್ದರು.

ಜವಾಬ್ದಾರಿ ಸರಕಾರಕ್ಕಾಗಿ ನಡೆಸಿದ ಚಳುವಳಿಗಳು ತುಮಕೂರು, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಉಗ್ರವಾಗಿದ್ದು, ತುಮಕೂರು ಜಿಲ್ಲೆ ಎಲ್ಲರಿಗಿಂತ ಮುಂದಿತ್ತು. ಮುಂದೆ ಕೆ. ಜಿ. ಎಫ್.ನಲ್ಲಿ ನಡೆದ ಚಿನ್ನದ ಗಣಿ ಸತ್ಯಾಗ್ರಹಕ್ಕೆ ಜಿಲ್ಲೆಯಿಂದ ೧೫೧ ಜನ ಕಾಲ್ನಡಿಗೆಯಿಂದ ಹೋಗಿ ಬಂಧಿತರಾದರು. ಇವರಲ್ಲಿ ಕೆ. ಹೆಂಜೇರಪ್ಪನವರೂ ಸೇರಿದ್ದು ಅವರಿಗೆ ಮೂರು ತಿಂಗಳು ಶಿಕ್ಷೆ ಆಯಿತು. ಮುಂದೆ ಅವರ ವಕೀಲಿ ಸನ್ನದು ಒಂದು ವರ್ಷ ರದ್ದಾಯಿತು.



೧೯೩೯ರಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ೧೩ ಸ್ಥಾನ ಗೆದ್ದು ಅಧ್ಯಕ್ಷ ಉಪಾಧ್ಯಕ್ಷ ಪದವಿ ಪಡೆಯಿತು. ೧೯೪೦ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಜಿಲ್ಲೆಯ ೨೫ರಲ್ಲಿ ೨೦ ಸ್ಥಾನ ಪಡೆಯಿತು. ೧೯೪೪ರಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ೨೧ರಲ್ಲಿ ೧೭ ಸ್ಥಾನ ಗೆದ್ದಿತು.

'ಕ್ವಿಟ್ ಇಂಡಿಯಾ' ಚಳುವಳಿ (೧೯೪೨) ಆರಂಭ ಆದಾಗ ಪೇಟೆ, ಪಟ್ಟಣಗಳ ವಿದ್ಯಾರ್ಥಿಗಳೂ ಭಾರಿ ಸಂಖ್ಯೆಯಲ್ಲಿ ಪಾಲುಗೊಂಡರು. ಆಗ ತಾಳಕೆರೆ ಸುಬ್ರಹ್ಮಣ್ಯ ಮೈಸೂರು ಕಾಂಗ್ರೆಸ್ ಅಧ್ಯಕ್ಷರು. ಮುಂಬೈ ಎ.ಐ.ಸಿ.ಸಿ.ಗೆ ಹೋಗಿದ್ದ ಅವರು ಬೆಂಗಳೂರಿಗೆ ಮರಳುತ್ತಿದ್ದಂತೆ ಯಶವಂತಪುರ ರೈಲು ನಿಲ್ದಾಣದಲ್ಲಿ ಆಗಸ್ಟ್ ೧೨ ರಂದು ಬಂಧಿತರಾದರು. ಅವರ ಜೊತೆ ನಿಜಲಿಂಗಪ್ಪ ಮುಂತಾದ ಗಣ್ಯ ನಾಯಕರನ್ನು ಅಲ್ಲೇ ಬಂಧಿಸಿದರು.

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ ಮಧುಗಿರಿ ಪರಿಸರದ ಸ್ವಾತಂತ್ರ್ಯ ಯೋಧರ ವಿವರ 'ತುಮಕೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ (ರಿ) ತುಮಕೂರು ೧೯೯೨'ರಲ್ಲಿ ಹೊರತಂದಿರುವ ಚಲೇಜಾವ್ ಚಳುವಳಿ ೫೦ನೇ ವಾರ್ಷಿಕೋತ್ಸವ ೧೯೯೨ ಸ್ಮರಣ ಸಂಚಿಕೆಯಲ್ಲಿ ಬಹಳಷ್ಟು ಮಾಹಿತಿ ಇದೆ. ಅದನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

**ಶ್ರೀ ಹನುಮಂತಶೆಟ್ಟಿ :** ಇವರು ಬ್ಯಾಲ್ಯದ ವೆಂಕಟರಾಮಯ್ಯ ಶೆಟ್ಟಿಯವರ ಮಕ್ಕಳು. ತಮ್ಮ ೫೦ನೇ ವಯಸ್ಸಿನಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ತುಮಕೂರು ಜೈಲಿನಲ್ಲಿ ೯ ತಿಂಗಳು ತುರಂಗವಾಸ ಅನುಭವಿಸಿದರು.

**ಶ್ರೀ ಕೆ. ಹೆಂಜಾರಪ್ಪ :** ಇವರು ಮಧುಗಿರಿಯ ಪ್ರಸಿದ್ಧ ವಕೀಲರು. ೧೯೦೫ರಲ್ಲಿ ಜನಿಸಿದರು. ನಿಷ್ಠಾವಂತ ಕಾಂಗ್ರೆಸ್ಸಿಗರು. ಇವರು ಶಿವಪುರದ ಧ್ವಜಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಿ ಮೈಸೂರು ಸರ್ಕಾರದ ವಿರುದ್ಧ ನಡೆದ ಹೋರಾಟ ಇವುಗಳಲ್ಲಿ ಮುಖಂಡತ್ವ ವಹಿಸಿ ಚಳುವಳಿ ನಡೆಸಿದರು. ಇವರು ಮೈಸೂರು,

ಹಾಸನ, ಬೆಂಗಳೂರು ಜೈಲುಗಳಲ್ಲಿ ಒಟ್ಟು ಒಂದು ವರ್ಷ ಆರು ತಿಂಗಳು ಹದಿಮೂರು ದಿವಸ ಸೆರೆಮನೆವಾಸ ಅನುಭವಿಸಿದರು.

**ಶ್ರೀ ಆನಂದಶೆಟ್ಟಿ :** ಶ್ರೀಯುತರು ಮಧುಗಿರಿಯ ಪ್ರಸಿದ್ಧ ವಕೀಲರು. ಇವರು ೧೯೪೨ ಕ್ವಿಟ್ ಇಂಡಿಯಾ ಹಾಗೂ ಮೈಸೂರು ಚಲೋ ಚಳುವಳಿಗಳಲ್ಲಿ ಭಾಗವಹಿಸಿದರು. ಇವರಿಗೆ ಆರು ತಿಂಗಳು ಶಿಕ್ಷೆ ಆಯಿತು. ಒಂದು ವರ್ಷ ಸೆರೆಮನೆವಾಸವನ್ನು ಅನುಭವಿಸಿದರು.

**ಬಿ.ವಿ.ರಂಗಪ್ಪ :** ಹದಿನೆಂಟನೇ ವಯಸ್ಸಿನಲ್ಲಿಯೇ ಕ್ವಿಟ್ ಇಂಡಿಯಾ ಚಳುವಳಿಗೆ ಪ್ರವೇಶ. ಮಧುಗಿರಿಯಿಂದ ಹತ್ತು ತಿಂಗಳು ಗಡೀಪಾರು. ೧೯೪೭ರಲ್ಲಿ ಮಧುಗಿರಿ ಸಬ್‌ಜೈಲಿನಲ್ಲಿ ೨೦ ದಿನಗಳ ಸೆರೆಮನೆ ವಾಸ. ಶ್ರೀಗಳಾದ ಮಾಲಿ ಮರಿಯಪ್ಪ, ಹೆಂಜೇರಪ್ಪ ಮುಂತಾದ ನಾಯಕರುಗಳ ಮಾರ್ಗದರ್ಶನದಲ್ಲಿ ಹೋರಾಟ. ನಂತರ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ಕಾರ್ಮಿಕ ಸಂಘಟನೆ. ಕೆಲಸದಿಂದ ನಿವೃತ್ತಿಯಾದ ಮೇಲೆ ತುಮಕೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಪ್ರಧಾನ ಕಾರ್ಯದರ್ಶಿ.

ಶಿರಾ ತಾಲ್ಲೂಕಿನಲ್ಲಿ ಸಿ. ವಿ. ರಾಣೋಜಿರಾವ್, ಕೆಂಚಪ್ಪ, ಬಿ. ವಿ. ಕೃಷ್ಣಯ್ಯ ಶೆಟ್ಟಿ, ಸಿ. ಜೆ. ಮುಕ್ಕಣ್ಣಪ್ಪ, ಬಿ. ಎನ್. ರಾಮೇಗೌಡ, ನರಸಿಂಹಮೂರ್ತಿ, ಪಾವಗಡ ತಾಲ್ಲೂಕಿನಲ್ಲಿ ಸಿದ್ಧ, ಇ. ಎನ್. ವೆಂಕಟೇಶಗುಪ್ತ, ರಂಧಂಗಪಾಣಿ ಇನ್ನೂ ಮುಂತಾದ ಮಹನೀಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು.

**ಕೊರಟಗೆರೆ ತಾಲೂಕಿನಲ್ಲಿ–**

**ಟಿ. ಆರ್. ಚನ್ನಪ್ಪ :** ಇವರು ತೀತಾ ಗ್ರಾಮದವರು. ಧ್ವಜಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ದೆಹಲಿ ಚಲೋ, ಮೈಸೂರು ಚಲೋ ಚಳುವಳಿಗಳಲ್ಲಿ ಭಾಗವಹಿಸಿ ಆಗಿನ ಸತ್ಯಾಗ್ರಹ ಯುಗದಲ್ಲಿ ಇವರು ಪ್ರಸಿದ್ಧ ಕ್ರಾಂತಿಕಾರಿ ಎನಿಸಿದರು. ಮಧುಗಿರಿ, ತುಮಕೂರು, ಕೊರಟಗೆರೆ ಜೈಲುಗಳಲ್ಲಿ ಮೂರು ತಿಂಗಳು, ಹತ್ತೊಂಬತ್ತು ದಿನಗಳ ಶಿಕ್ಷೆ ಅನುಭವಿಸಿದರು. ಇವರು ಮಾಜಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರು, ವಾಣಿ ವಿದ್ಯಾಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿದ್ದರು.

**ಚನ್ನಿಗರಾಮಯ್ಯ :** ಚನ್ನಿಗರಾಮಯ್ಯನವರು ಕೊರಟಗೆರೆಯಲ್ಲಿ ೧೯೧೧ರಲ್ಲಿ ಜನಿಸಿದರು. ವ್ಯವಸಾಯಗಾರ ಮನೆತನದವರು ಹಾಗೂ ಪ್ರಸಿದ್ಧ ಸಮಾಜಸೇವಕರು. ೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ



೧೯೪೭ರಲ್ಲಿ ಮೈಸೂರು ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದಲ್ಲಿ, ಭಾಗವಹಿಸಿದರು. ತುಮಕೂರು, ಬೆಂಗಳೂರು ಜೈಲುಗಳಲ್ಲಿ ಒಂದೂವರೆ ತಿಂಗಳು ಜೈಲುಶಿಕ್ಷೆ ಅನುಭವಿಸಿದರು. ೧೯೪೩ರಲ್ಲಿ ಬೆಂಗಳೂರಿನಲ್ಲಿ ಮಾಡೆಲ್ ಡೈರಿ ಫಾರಂ ಸ್ಥಾಪಿಸಿದರು. ಮೈಸೂರು ಹೈನು ಉತ್ಪಾದಕರ ಸಂಘದ ಸ್ಥಾಪಕಾಧ್ಯಕ್ಷರಾಗಿದ್ದರು. ೧೯೬೦ರಲ್ಲಿ ಪ್ರಥಮ ಬಾರಿಗೆ ರಾಜ್ಯಸಭೆಗೆ ಆಯ್ಕೆಗೊಂಡರು. ೧೯೬೪–೬೫ರಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿದ್ದರು. ಕೆಲವು ವರ್ಷಗಳ ಕಾಲ ಅನಂತಪುರಂ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜಂಟಿ ಕಾರ್ಯದರ್ಶಿಗಳಾಗಿದ್ದರು.

**ಬಿ.ಕೆ. ಪುಟ್ಟಣಶೆಟ್ಟಿ :** ಮಧುಗಿರಿ ಮೂಲದವರು. ಇವರು ಬಾಲ್ಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಮಾಡಿದ ಹೋರಾಟವನ್ನು ನೇರವಾಗಿ ಬಿ.ಕೆ. ಪುಟ್ಟಣ್ಣಶೆಟ್ಟಿ ಅವರ ಹತ್ತಿರವೇ ಚರ್ಚೆ ಮಾಡಿ ಸ್ನೇಹಿತರಾದ ಡಾ. ಡಿ.ಎನ್. ಯೋಗೀಶರವರು ಅಮೂಲ್ಯವಾದ ಲೇಖನ ಸಿದ್ಧಪಡಿಸಿ 'ಮಧುಗಿರಿಯ ಬಾಲಕ ಯರವಾಡ ಜೈಲಿನಲ್ಲಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಲೇಖನ ಬರೆದು ೧೯೯೦ರಲ್ಲಿ ಮಧುಗಿರಿ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಸಂಚಿಕೆ 'ಗಿರಿನುಡಿ'ಯಲ್ಲಿ ಪ್ರಕಟವಾಗಿದೆ.

ಬಿ. ಕೆ. ಪುಟ್ಟಣ್ಣಶೆಟ್ಟಿ ಎಂದು ಕರೆಯುವ ಇವರು ಕಂಬದೂರಪ್ಪ ಮತ್ತು ಚನ್ನಬಸಮ್ಮ ಎಂಬುವರ ಕಿರಿಯ ಪುತ್ರನಾಗಿ ೨೪–೧೨–೧೯೨೪ರಂದು ಮಧುಗಿರಿಯಲ್ಲಿ ಜನಿಸಿದರು. ತುಮಕೂರಿನಲ್ಲಿ ಪ್ರಾಣಿದಯಾ ಸಂಘ ಎಂಬ ಸಂಸ್ಥೆ ಇದ್ದಿತು. ಇದು ಸಾರ್ವಜನಿಕ ಸಂಸ್ಥೆಯಾಗಿದ್ದು ಕಸಾಯಿಖಾನೆಗೆ ಹೋಗುವ ದನಗಳನ್ನು ಕಾಪಾಡುವುದು ಮತ್ತು ಜಾತ್ರೆಗಳಲ್ಲಿ ಪ್ರಾಣಿಬಲಿಯನ್ನು ತಡೆಯುವುದು ಮುಖ್ಯ ಕೆಲಸವಾಗಿತ್ತು. ೧೯೩೦ರಲ್ಲಿ ಆರಂಭವಾದ ಈ ಸಂಸ್ಥೆಗೆ ಗುಬ್ಬಿ ಹುಚ್ಚಪ್ಪನವರು ಅಧ್ಯಕ್ಷರಾಗಿದ್ದರು. ಅವರು ಈ ಸಂಸ್ಥೆಯ ಪ್ರಚಾರಕರಾಗಿ ಗಾಂಧೀಜಿ ತತ್ವದಲ್ಲಿ ಅಚಲವಾದ ನಂಬಿಕೆಯನ್ನಿಟ್ಟಿದ್ದರು. ಇಂತಹ ಸಂಸ್ಥೆಗೆ ತುಮಕೂರಿಗೆ ಆಗಮಿಸಿದ ಕಂಬದೂರಪ್ಪನವರು ಪ್ರಚಾರಕ್ಕಾಗಿ ಸೇರಿಕೊಂಡರು. ಪ್ರಚಾರಕ್ಕಾಗಿ ಹೋಗುತ್ತಿದ್ದ ಸಮಯದಲ್ಲಿ ತಮ್ಮ ಕಿರಿಯ ಮಗನಾದ ಪುಟ್ಟಣ್ಣನನ್ನು ಕರೆದುಕೊಂಡು ಹೋಗುತ್ತಿದ್ದರು. ಸಹಜವಾಗಿ ಚಿಕ್ಕವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿರದಿಂದ ನೋಡಿದ್ದರಿಂದ ಅವರ ಪ್ರಭಾವ ಪುಟ್ಟಣ್ಣಶೆಟ್ಟಿಯವರ ಮೇಲೆ ಆಯಿತು.

ಸ್ವಾತಂತ್ರ್ಯ ಹೋರಾಟದ ಅಂಗವಾಗಿ ಖಾದಿಯ ಬಳಕೆ, ಗ್ರಾಮ ಕೈಗಾರಿಕೆಗಳ ಪುನರುತ್ಥಾನ, ದೇಶೀಯ ವಸ್ತುಗಳ ಉತ್ಪಾದನೆಗೆ ಉತ್ತೇಜನ, ಹರಿಜನೋದ್ಧಾರ ಮುಂತಾದ ಕಾರ್ಯಕ್ರಮಗಳನ್ನು ಮೈಸೂರು ಸಂಸ್ಥಾನದಲ್ಲಿಯೂ ಹಮ್ಮಿಕೊಳ್ಳಲಾಗಿತ್ತು. ಇದರ ಪ್ರಚಾರಕ್ಕೋಸ್ಕರ ಮಹಾತ್ಮ ಗಾಂಧೀಜಿಯವರು ಮೈಸೂರಿನ ತಮ್ಮ ಪ್ರವಾಸದ ವೇಳೆಯಲ್ಲಿ ೧೯೩೪ರ ಜನವರಿ ೪ ರಂದು ತುಮಕೂರಿಗೆ ಆಗಮಿಸಿ ಹರಿಜನ ಕೇರಿಗೆ ಭೇಟಿ ನೀಡಿ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಬಹಿರಂಗ ಸಭೆಯಲ್ಲಿ ಹೋರಾಟದ ರೂಪುರೇಷೆಯ ಬಗ್ಗೆ ಮಾತನಾಡಿದರು. ಗಾಂಧೀಜಿ ತುಮಕೂರಿನಲ್ಲಿ ಇರುವವರೆಗೂ ಅವರ ಹಿಂದೆ ಮುಂದೆ ಓಡಾಡಿಕೊಂಡಿದ್ದ ಬಾಲಕ ವಿದ್ಯಾರ್ಥಿ ಪುಟ್ಟಣ್ಣಶೆಟ್ಟಿಯವರ ಮೇಲೆ ಅವರ ಸರಳತೆ, ಮಾತುಗಳು ಪರಿಣಾಮ ಬೀರಲಾರಂಭಿಸಿ, ರಾಷ್ಟ್ರೀಯ ಚಳುವಳಿಗೆ ಧುಮಕಲು ಪ್ರೇರೇಪಣೆ ನೀಡಿದವು. ಕ್ರಮೇಣ ಇವರು ಶಾಲೆಗೆ ತಪ್ಪಿಸಿಕೊಳ್ಳುವುದು, ಚಳುವಳಿಗಾರರ ಸಂಗಡ ಓಡಾಡುವುದು ದಿನನಿತ್ಯದ ಕಾರ್ಯವಾಗಿತ್ತು. ಇವರು ಹಿರಿಯರಾಗಿದ್ದ ಗುಬ್ಬಿ ಹುಚ್ಚಪ್ಪ, ಕರಿಬಸಪ್ಪ, ಶ್ರೀಕಂಠಯ್ಯ ಇವರುಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಲು ಪ್ರಯತ್ನಿಸಿದರು. ೧೯೩೩ ಜನವರಿ ತುಮಕೂರಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಚಳುವಳಿಗಾರರು ಮುಂದಾದಾಗ ಸರ್ಕಾರ ಅದನ್ನು ನಿಷೇಧಿಸಿ ಆಜ್ಞೆ ಹೊರಡಿಸಿತು. ೧೯೪೨ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂದು ಗಾಂಧೀಜಿ ಕರೆಕೊಟ್ಟರು. ಈ ಕರೆಗೆ ಓಗೊಟ್ಟು ೯ನೇ ತರಗತಿ ಓದುತ್ತಿದ್ದ ಪುಟ್ಟಣ್ಣಶೆಟ್ಟಿ ವಿದ್ಯಾರ್ಥಿಗಳ ನಾಯಕತ್ವ ವಹಿಸಿಕೊಂಡು ಚಳುವಳಿಗೆ ಧುಮುಕಿದರು. ಇವರ ಜೊತೆ ಕೆ. ಎನ್. ರಾಜಪ್ಪ, ಡಾ. ಕೆ. ಎಚ್. ಚೆಲುವರಾಜು, ಜಿ. ವಿ. ಆಂಜನಪ್ಪ ಮುಂತಾದವರು ಹೋರಾಟದ ಮುಂಚೂಣಿಯಲ್ಲಿದ್ದರು. ಇವರೆಲ್ಲಾ ಶಾಲೆಗೆ ಹೋಗದಂತೆ ವಿದ್ಯಾರ್ಥಿಗಳನ್ನು ತಡೆಗಟ್ಟುವುದು, ಟೆಲಿಫೋನ್ ವೈರುಗಳನ್ನು ಕತ್ತರಿಸುವುದು, ಕರಪತ್ರಗಳನ್ನು ಹಂಚುವುದು ಮುಂತಾದ ಕೆಲಸಗಳನ್ನು ಮಾಡಿ ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಿದ್ದರು. ಇದರಿಂದ ಪೊಲೀಸನವರಿಗೆ ಈ ಬಾಲಕನ ಮೇಲೆ ಕಣ್ಣು ಬಿದ್ದುದರಿಂದ ಅದರಿಂದ ತಪ್ಪಿಸಿಕೊಳ್ಳಲು ಹಲವಾರು ವಿದ್ಯಾರ್ಥಿಗಳೊಂದಿಗೆ ಭೂಗತರಾದರು. ೧೯೪೨ ಆಗಸ್ಟ್ ಕೊನೆಯ ವಾರದಲ್ಲಿ ಮಧುಗಿರಿಗೆ ತಪ್ಪಿಸಿಕೊಂಡು ಹೋಗಿ, ಆನಂದಶೆಟ್ಟಿ ಆಯುಷ್ಕರ್ಮಶಾಲೆಯಿಂದ ಆಂಜನಪ್ಪನವರ ಜೊತೆಗೂಡಿ ಅಲ್ಲಿ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಚಳುವಳಿ ಆರಂಭಿಸಿದರು. ಈ ಮಧ್ಯೆ ಗೌರಿಹಬ್ಬ ಬಂದಿದ್ದರಿಂದ ವಿದ್ಯಾರ್ಥಿಗಳೆಲ್ಲಾ ತಮ್ಮ ಊರುಗಳಿಗೆ ಪ್ರಯಾಣ ಬೆಳೆಸಿದ್ದರಿಂದ ಪುಟ್ಟಣ್ಣಶೆಟ್ಟರೂ ಕೂಡ ಬಡವನಹಳ್ಳಿಯ ೧೩ನೇ ಮೈಲಿಕಲ್ಲಿನಲ್ಲಿ ೧೧೦೦ ಅಡಿ ಉದ್ದದ ಟೆಲಿಗ್ರಾಫ್ ತಂತಿಯನ್ನು ಕತ್ತರಿಸಿ ಸುರುಳಿ ಮಾಡಿ ಬಾವಿಯೊಂದರಲ್ಲಿ ಹಾಕಿದರು. ಆ ಸಮಯದಲ್ಲಿ ಹೋರಾಟದ ಅಂಗವಾಗಿ ವಿದೇಶಿ ವಸ್ತ್ರಗಳನ್ನು ಸುಡುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು ಸಾಮಾನ್ಯವಾಗಿತ್ತು. ಬಡವನಹಳ್ಳಿ ಕರಿಬಸಪ್ಪನವರ ಮನೆಯಲ್ಲಿ ಊಟ ಮಾಡುತ್ತಾ ಇದ್ದ ಬಿ. ಕೆ. ಪುಟ್ಟಣ್ಣಶೆಟ್ಟಿ ಅವರನ್ನು ೧೩–೩–೧೯೪೨ರಂದು ಬಂಧಿಸಿ ಮಧುಗಿರಿ ಜೈಲಿನಲ್ಲಿ ಒಂದೂವರೆ ತಿಂಗಳು ಇರಿಸಲಾಗಿತ್ತು. ತದನಂತರ ಜಾಮೀನು ಮೇಲೆ ಬಿಡುಗಡೆ ಮಾಡಲಾಯಿತು. ತುಮಕೂರಿನ ಜೈಲಿನಲ್ಲಿ ಇಟ್ಟಿರುವ ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡುವವರೆಗೆ ಹಾಗೂ ಅವರ ಮೇಲಿರುವ ಮೊಕದ್ದಮೆಗಳನ್ನು ಹಿಂತೆಗೆದು ಕೊಳ್ಳುವವರೆಗೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹಾಜರಾಗುವುದಿಲ್ಲ ಎಂದಾಗ ದಿನಾಂಕ ೫.೧೧.೧೯೪೨ರಂದು ಜೈಲಿನಿಂದ ವಿದ್ಯಾರ್ಥಿ ಮುಖಂಡರುಗಳನ್ನು ಬಿಡುಗಡೆ ಮಾಡಲಾಯಿತು. ಅವರ ವಿರುದ್ಧದ ಎಲ್ಲಾ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಪುಟ್ಟಣ್ಣಶೆಟ್ಟರೂ ಬಿಡುಗಡೆಯಾದರು. ತದನಂತರ ತುಮಕೂರಿಗೆ ಬಂದರು. ಬೆಂಗಳೂರು ಚಳುವಳಿಗಾರರಿಂದ ಕರೆಬಂದಿದ್ದರಿಂದ ಅವರ ತಂದೆ ತಾಯಿಗಳು ೨೬.೨.೧೯೪೩ರಂದು ಕೆ. ವೈ. ಪರಮಶಿವಯ್ಯನವರ ಜೊತೆ ಬೆಂಗಳೂರಿಗೆ ಕಳುಹಿಸಿದರು. ಅಲ್ಲಿ ಅವರ ಚಟುವಟಿಕೆಗಳು ಆನಂದಭವನದ ನೆಲಮಾಳಿಗೆಯಲ್ಲಿ ಆರಂಭವಾದವು.

ಗಾಂಧೀಜಿಯವರನ್ನು ದಸ್ತಗಿರಿ ಮಾಡಿದ ಮೇಲೆ ೧೯೪೩ ಫೆಬ್ರವರಿ ೧೦ನೇ ತಾರೀಖು ೨೧ ದಿನಗಳ ಉಪವಾಸ ಆರಂಭಿಸಿದರು. ಅವರ ಉಪವಾಸಕ್ಕೆ ಸಹಾನುಭೂತಿ ತೋರಿಸುವ ಮತ್ತು ಸರ್ಕಾರದ ಧೋರಣೆಯನ್ನು ಪ್ರತಿಭಟಿಸುವ ಉದ್ದೇಶದಿಂದ ದೇಶದ ಮೂಲೆ ಮೂಲೆಗಳಿಂದ ಹಲವಾರು ತಂಡಗಳು ಪೂನಾಕ್ಕೆ ಹೋಗಿ ಪ್ರದರ್ಶನಗಳನ್ನು ನಡೆಸುವ ಪ್ರಯತ್ನಗಳೂ ನಡೆದವು. ಹೋರಾಟದ ಹುಮ್ಮಸ್ಸಿನಲ್ಲಿದ್ದವರು ಸ್ವಯಂ ಪ್ರೇರಿತರಾಗಿ ಅಜ್ಞಾತ ಸ್ಥಳವಾದ ಪೂನಾಕ್ಕೆ ಹೋಗಲು ಸಿದ್ಧರಾದರು. ಇವರ ಜೊತೆ ಡಾ. ಎಚ್.

ನರಸಿಂಹಯ್ಯ, ಯಳ್ಳಂಬೆಳಸೆ ಚಂದ್ರಶೇಖರಯ್ಯ ಇದ್ದರು. ಕಾಂಗ್ರೆಸ್ ನಾಯಕ ವೆಂಕಟರಾಯರು ಈ ಬಾಲಕರನ್ನು ಪೂನಾಕ್ಕೆ ರೈಲಿನಲ್ಲಿ ಕಳುಹಿಸಿಕೊಟ್ಟರು. ಪೂನಾ ತಲುಪಿದಾಗ ಯಾವ ಕಡೆ ಹೋಗಬೇಕೆಂದು ತಿಳಿಯದೆ ಪುಟ್ಟಣ್ಣಶೆಟ್ಟರು ಮತ್ತು ಅವರ ತಂಡ ಜನನಿಬಿಡವಾದ ಪ್ರದೇಶವನ್ನು ತಲುಪಿದರು. ಅಲ್ಲಿ ಅವರು ತಂದಿದ್ದ ಕಾಂಗ್ರೆಸ್ಸಿನ ಬಾವುಟವನ್ನು ಬೀಸುತ್ತಾ ಗಾಂಧೀಜಿಯವರನ್ನು ಬಿಡುಗಡೆಗೊಳಿಸಿ ಎಂಬ ಘೋಷಣೆ ಮಾಡುತ್ತಾ ಮೆರವಣಿಗೆಯನ್ನು ಮಾಡತೊಡಗಿದರು. ಆಗ ಇದನ್ನು ತಡೆದ ಪೊಲೀಸರು ಬಂಧಿಸಿ ಲಾಕಪ್‌ಗೆ ಹಾಕಿದರು.

ಹಿರಿಯ ಅಧಿಕಾರಿಗಳು ಈ ಬಾಲಕರನ್ನು ಗಮನಿಸಿ, ನೀವು ಕ್ಷಮಾಪಣೆ ಪತ್ರ ಬರೆದುಕೊಟ್ಟರೆ ಬಿಡುಗಡೆ ಮಾಡಿ ನಿಮ್ಮ ಊರಿಗೆ ಕಳುಹಿಸುವ ಏರ್ಪಾಟು ಮಾಡುತ್ತೇವೆ ಎಂದು ತಿಳಿಸಿದಾಗ ಪುಟ್ಟಣ್ಣಶೆಟ್ಟರ ತಂಡ ಅದನ್ನು ಒಪ್ಪದಿದ್ದಾಗ ೧.೩.೧೯೪೩ರಂದು ಯರವಾಡ ಸೆಂಟ್ರಲ್ ಜೈಲಿಗೆ ಹಾಕಲಾಯಿತು.

ಪುಟ್ಟಣ್ಣಶೆಟ್ಟರು ತಿಳಿಸುವಂತೆ ಯರವಾಡ ಜೈಲಿನಲ್ಲಿ ಅವರಲ್ಲಿದ್ದ ಹಣ ಮತ್ತು ಸಣ್ಣಪುಟ್ಟ ವಸ್ತುಗಳನ್ನು ಜೈಲಿನ ಅಧಿಕಾರಿಗಳು ವಶಪಡಿಸಿಕೊಂಡರಂತೆ. ಇವರನ್ನು ಎಂಟ್ಹತ್ತು ಮಂದಿ ವಾಸಮಾಡುವಂತಹ ಕೊಠಡಿಯಲ್ಲಿ ಹಾಕಿದರು. ಊಟಕ್ಕೆ ಒಂದು ಕಬ್ಬಿಣದ ಜರಡಿಯಂತಹ ತಟ್ಟೆ, ನೀರು ಕುಡಿಯುವುದಕ್ಕೆ ಸ್ನಾನಕ್ಕೆ ಉಳಿದ ಎಲ್ಲಾ ಕೆಲಸವನ್ನು ಮಾಡಲು ಉಪಯೋಗಿಸಬೇಕಾದ ಒಂದು ದೊಡ್ಡ ಕಬ್ಬಿಣದ ಲೋಟ ಕೊಟ್ಟಿದ್ದರು. ಪ್ರತಿನಿತ್ಯ ಆ ಪಾತ್ರೆಗಳ ಕಿಲುಬು ತೆಗೆಯುವುದೇ ಒಂದು ಕೆಲಸವಾಗಿತ್ತು. ಸಂಜೆ ಆರು ಗಂಟೆಯ ವೇಳೆಗೆ ಎಲ್ಲರನ್ನೂ ಅವರ ನಿವಾಸದೊಳಗೆ ದೂಡಿ ಬೀಗ ಹಾಕುತ್ತಿದ್ದರು. ಬಾಗಿಲು ತೆರೆಯುವುದು ಮರುದಿನ ಬೆಳಗ್ಗೆ ಆರುಗಂಟೆಗೆ. ಹೀಗೆ ದಿನದ ಅರ್ಧ ಭಾಗವನ್ನು ಜೈಲಿನಲ್ಲಿರುವ ಉಪಜೈಲಿನಲ್ಲಿ ಕಳೆಯುತ್ತಿದ್ದರು. ಇವರ ಉಸ್ತುವಾರಿಗೆ ದೀರ್ಘಾವಧಿ ಜೀವಾವಧಿ ಶಿಕ್ಷೆ ಅನುಭವಿಸುತ್ತಾ ಇರುವ ಕೈದಿಗಳನ್ನು ನೇಮಿಸಲಾಗಿತ್ತು. ಇವರ ಕೆಲಸ ಪ್ರತಿನಿತ್ಯ ರಾತ್ರಿ ಮೂರು ನಾಲ್ಕು ಸಲ ಹೋರಾಟಗಾರರನ್ನೆಲ್ಲಾ ಎಣಿಸಿ ಸಂಖ್ಯೆಯಲ್ಲಿ ಏನೂ ವ್ಯತ್ಯಾಸವಾಗಿಲ್ಲ ಎಂದು ಖಚಿತಪಡಿಸಿಕೊಳ್ಳುವುದಾಗಿತ್ತು. ಇವರನ್ನೆಲ್ಲಾ ಕಂಡರೆ ಅವರು ಹಾಸ್ಯ ಮಾಡುತ್ತಿದ್ದರಂತೆ.



ಈ ಗಾಂಧಿ ಕೈದಿಗಳು ಇವತ್ತು ಬರ್‍ತಾರೆ ನಾಳೆ ಹೋಗ್ತಾರೆ, ೧೦–೧೨ ವರ್ಷಗಳಿಂದ ಈ ಖಾದೀ ಗಾಂಧಿ ಗಲಾಟೆ ನೋಡುತ್ತಲೇ ಇದ್ದೇವೆ ಎಂದು ಮೂದಲಿಸಿ ಲೇವಡಿ ಮಾಡುತ್ತಿದ್ದರಂತೆ. ಜೈಲಿನ ಆಹಾರವಂತೂ ತೀರಾ ಹೊಸದಾಗಿತ್ತು. ಬೆಳಗ್ಗೆ ಒಂದು ಅಳತೆ ಪಾವಿನಷ್ಟು ಗಂಜಿ, ಮಧ್ಯಾಹ್ನ ಮತ್ತು ಸಂಜೆ ಒಂದು ಜೋಳದ ರೊಟ್ಟಿ, ಜೊತೆಗೆ ಹೆಚ್ಚಿಗೆ ಕಾಣಿಸುವಂಥ ಎಲ್ಲಾ ತರಹದ ಸೊಪ್ಪುಗಳನ್ನು ಹಾಕಿ ಬೇಯಿಸಿದ ಹುಳಿ ಹಾಕುತ್ತಿದ್ದರು. ಹೀಗೆ ಗಂಜಿಯೇ ಪರಮಾನ್ನ ಪಂಚಾಮೃತವಾಯಿತು. ಭಾನುವಾರ ಮಾತ್ರ ವಿಶೇಷ ಊಟ, ಸಿಹಿ ನೀಡಲಾಗುತ್ತಿತ್ತು. ಈ ಹಬ್ಬದ ಊಟಕ್ಕೆ ಜೋಳದ ರೊಟ್ಟಿಗೆ ಬದಲಾಗಿ ಒಂದು ಗೋಧಿ ಚಪಾತಿ, ಒಂದು ಚಿಕ್ಕ ನಿಂಬೆಕಾಯಿ ಗಾತ್ರದಷ್ಟು ಬೆಲ್ಲ. ತೀರ್ಥಕೊಡುವಂತಹ ಒಂದು ಸಣ್ಣ ಉದ್ಧರಣೆಯಲ್ಲಿ ಎಣ್ಣೆ ನೀಡುತ್ತಿದ್ದರು. ಆ ಜೈಲಿನಲ್ಲಿ ಆರು ತಿಂಗಳಲ್ಲಿ ಒಂದು ದಿನವೂ ಹೊಟ್ಟೆ ತುಂಬುವಷ್ಟು ಊಟವನ್ನು ಕೊಡಲಿಲ್ಲ.

ಜೈಲಿನಲ್ಲಿ ಒಂದೂವರೆ ತಿಂಗಳಾದ ಮೇಲೆ ಅವರ ಮೇಲಿನ ಮೊಕದ್ದಮೆ ವಿಚಾರಣೆಗೆ ಬಂದಿತು. ಜೈಲಿನಲ್ಲಿಯೇ ಕೋರ್ಟು, ಪ್ರತಿಬಂಧಕಾಜ್ಞೆ ಮುರಿದ ಆಪಾದನೆಯನ್ನು ಪುಟ್ಟಣ್ಣಶೆಟ್ಟರು ಒಪ್ಪಿಕೊಂಡು, ಕ್ಷಮಾಪಣೆ ಕೇಳಿದರೆ ಬಿಡುಗಡೆ ಮಾಡುತ್ತೇವೆಂದು ನ್ಯಾಯಾಧೀಶರು ಅಪ್ಪಣೆ ಕೊಟ್ಟರು. ಮಾಮೂಲಿನಂತೆ ಪುಟ್ಟಣ್ಣಶೆಟ್ಟರು ನಿರಾಕರಿಸಿದಾಗ ೧೬ ಮೇ ೧೯೪೩ರಲ್ಲಿ ಮತ್ತೆ ಮೂರು ತಿಂಗಳು ಕಠಿಣ ಶಿಕ್ಷೆಯನ್ನು ನೀಡಿದರು. ಸಾದಾಶಿಕ್ಷೆ ವಿಧಿಸಿದರೆ ಕೆಲಸ ಮಾಡಬೇಕಾಗಿಲ್ಲ. ಕಠಿಣ ಶಿಕ್ಷೆಯವರಿಗೆ ಸೌಲಭ್ಯಗಳೆಲ್ಲಾ ಕಡಿತ, ಜೊತೆಗೆ ದಿನಕ್ಕೆ ಎಂಟು ಗಂಟೆ ಅವರು ಕೊಟ್ಟ ಕೆಲಸ ಮಾಡಬೇಕಾಗಿತ್ತು. ಇವರಿಗೆ ಕೈಯಲ್ಲಿ ಬುಟ್ಟಿ ಹೊಲಿಯುವ ಕೆಲಸವನ್ನು ನೀಡಲಾಗಿತ್ತು. ಉಡುಪಿನಲ್ಲಿ ಬದಲಾವಣೆ ಮಾಡಿ ದಪ್ಪ ಬಟ್ಟೆಯ ನಿಕ್ಕರ್, ಶರ್ಟು ಮತ್ತು ಟೊಪ್ಪಿಗೆಯನ್ನು ನೀಡಲಾಗಿತ್ತು. ಶಿಕ್ಷೆಯ ಅವಧಿ ಮುಗಿದು ೧೭.೮.೧೯೪೩ರಂದು ಅಲ್ಲಿಂದ ಅವರು ತಮ್ಮ ಊರಿಗೆ ಬಂದರು. ಚಳುವಳಿ ಇನ್ನೂ ಮುಗಿದಿರಲಿಲ್ಲ. ಆದರೆ ಕಾವು ತುಂಬಾ ಕಡಿಮೆಯಾಗಿತ್ತು. ಗಾಂಧೀಜಿ ಮತ್ತು ಉಳಿದ ನಾಯಕರುಗಳೆಲ್ಲಾ ಜೈಲಿನಲ್ಲಿದ್ದರು. ಸರ್ಕಾರ ಕೊಟ್ಟ ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನದಿಂದ ಜೀವನ ನಡೆಸುತ್ತಾ ಇದ್ದುದ್ದನ್ನು ಲೇಖಕನಾದ ನಾನು ಕಣ್ಣಿನಿಂದ ನೋಡಿದ್ದೇನೆ.

ಮಧುಗಿರಿ ಪಕ್ಕದ ಕೊರಟಗೆರೆ ತಾಲೂಕಿನ ತೀತಾ ಚನ್ನಪ್ಪನವರು ಅಥವಾ ಟಿ. ಆರ್. ಚನ್ನಪ್ಪನವರು '೧೯೪೨ರ ನಾನು ಕಂಡ ಚಳುವಳಿ' ಎಂಬ ಲೇಖನದಲ್ಲಿ ಬಹಳಷ್ಟು ಮಾಹಿತಿ ನೀಡಿದ್ದಾರೆ. ಅದರ ಸಾರಾಂಶವನ್ನು ಮಾತ್ರ ಇಲ್ಲಿ ನೀಡಿದ್ದೇನೆ.

"ಬೊಂಬಾಯಿನಿಂದ ನಾರಿಮನ್‌ರವರು ಬೆಂಗಳೂರಿಗೆ ಬಂದು ಸ್ವಾತಂತ್ರ್ಯ ಹೋರಾಟದ ಅಲೆ ಎಬ್ಬಿಸಿದಾಗ ಅವರ ದಸ್ತಗಿರಿ ಆಯಿತೆಂಬ ಸುದ್ದಿ ವಿದ್ಯಾರ್ಥಿಗಳಲ್ಲಿ ರೋಷ ಹುಟ್ಟಿಸಿತು. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲನ್ನು ಪಾಲ್ ಚಿನ್ನಪ್ಪ ಹೈಸ್ಕೂಲ್ ಎನ್ನುತ್ತಿದ್ದರು. ಕೋಟೆ ಹೈಸ್ಕೂಲುಗಳಿಂದ ವಿದ್ಯಾರ್ಥಿಗಳನ್ನು ಹೊರಡಿಸಿಕೊಂಡು ಎಸ್.ಎಲ್.ಎನ್. ಹೈಸ್ಕೂಲಿನ ವಿದ್ಯಾರ್ಥಿ ತಂಡವನ್ನೂ ಅವರ ಜೊತೆ ಬೆರೆಸಿ ಪುಟ್ಟಣ್ಣಶೆಟ್ಟಿ ಟೌನ್‌ಹಾಲ್ ಕಡೆ ನುಗ್ಗಿದೆವು. ಯುನೈಟೆಡ್ ಮಿಷನ್ ಹೈಸ್ಕೂಲಿನ ವಿದ್ಯಾರ್ಥಿಗಳನ್ನು ಹೊರಗೆ ಬಿಡದೆ ಅಲ್ಲಿನ ಆಡಳಿತ ಮಂಡಳಿ ತಡೆದರೂ ಲೆಕ್ಕಿಸದೆ ವಿದ್ಯಾರ್ಥಿಗಳನ್ನು ಹೊರಡಿಸಿದಾಗ ವಿದ್ಯಾರ್ಥಿಗಳ ಮಹಾಸಾಗರವಾಯಿತು. ಜೊತೆಗೆ ಕೆಲವು ಜನರೂ ಸೇರಿಕೊಂಡು ಆಗಿನ ಕಾಲಕ್ಕೆ ಅತಿ ದೊಡ್ಡ ಸಂದಣಿಯಾಗಿ ಮೈಸೂರು ಬ್ಯಾಂಕ್ ಕಡೆ ಹೊರಟೆವು. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು ನಮ್ಮ ಉದ್ದೇಶ್ಯವಾಗಿತ್ತು. ಹಾದಿಯಲ್ಲಿ ಬಲಗಡೆ ಕೋರ್ಟುಗಳು, ಎಡಗಡೆ ಬನಪ್ಪ ಪಾರ್ಕ್. ಈ ಮಧ್ಯೆ ಬರುವಾಗ ಪೊಲೀಸರ ದಂಡು ನಮ್ಮನ್ನು ತಡೆದಿದ್ದಷ್ಟೇ ಅಲ್ಲ ಹಿಗ್ಗಾಮುಗ್ಗಾ ಲಾಠಿಯಿಂದ ಹೊಡೆದರು. ಆಗ್ಗೆ ಗುಂಪಿನ ವಿದ್ಯಾರ್ಥಿಗಳೆಲ್ಲರಿಗೂ ದೊಡ್ಡ ಪೆಟ್ಟಿನ ರುಚಿ ಸಿಕ್ಕಿರಬೇಕೆನ್ನುವಷ್ಟು ಪೊಲೀಸರ ಧಾಳಿ ಎದುರಾಗಿತ್ತು. ಜಗ್ಗದ ಹುಡುಗರ ಗುಂಪಿನ ಮೇಲೆ ಬಂದೂಕು ಹಾರಿಸಿದರು. ದೊಡ್ಡ ಪೆಟ್ಟಿನಿಂದ ಘಾಸಿಗೊಂಡವರ ಪೈಕಿ ನಾನೂ ಒಬ್ಬನಾಗಿ ಬನಪ್ಪ ಪಾರ್ಕಿನೊಳಕ್ಕೆ ಜಿಗಿದು ಪೊಲೀಸರತ್ತ ನೋಡುತ್ತಿದ್ದೆ. ನನ್ನ ಪಕ್ಕದಲ್ಲಿ ನೋಡಲು ಬಂದು ನಿಂತಿದ್ದ ಅಣ್ಣಯ್ಯಪ್ಪನಿಗೆ ಪೊಲೀಸರ ಗುಂಡಿನೇಟು ತಗುಲಿ ನೆಲಕ್ಕೆ ಬಿದ್ದಾಗ ಕೇವಲ ೪೫ ಅಡಿ ದೂರದಲ್ಲಿದ್ದೆ. ರಕ್ತ ಸುರಿಯುತ್ತಿದ್ದ ಆತನನ್ನು ವ್ಯಾನಿಗೆ ಮಲಗಿಸಿ ವಿಕ್ಟೋರಿಯಾ ಆಸ್ಪತ್ರೆಗೆ ತಲುಪಿಸಿದೆವು. ಆ ಹುತಾತ್ಮನ ರಕ್ತ ಸಿಂಚನೆಯಿಂದ ನನ್ನ ರಾಷ್ಟ್ರಭಕ್ತಿ ಉಜ್ವಲವಾಗತೊಡಗಿತು. ಅಂದಿನಿಂದ ನಾನು ಖಾದಿಧಾರಿ ಗಾಂಧೀ ಭಕ್ತ, ರಾಷ್ಟ್ರ ಸ್ವಾತಂತ್ರ್ಯದಲ್ಲಿ ಆಸಕ್ತಿ ತಳೆದವನಾದೆ.



ಇಲ್ಲಿಂದಾಚೆಗೆ ಊರಿಗೆ ಬಂದಾಗಲೆಲ್ಲ ನನ್ನ ವಯಸ್ಸಿನ ಹುಡುಗರನ್ನು ಗುಂಪುಗೂಡಿಸಿ ಅವರಲ್ಲಿ ಸ್ವಾತಂತ್ರ್ಯ ಚಳುವಳಿಯ ಸ್ಫೂರ್ತಿ ಬೆಳೆಯುವಂತೆ ಮಾಡತೊಡಗಿದೆ. ಪ್ರತಿಯಾಗಿ ಪೊಲೀಸಿನವರು ಭಿಕಾರಿಗಳು ಎಂಬ ಗುಣವಾಚಕಗಳನ್ನು ನಮ್ಮ ಗುಂಪಿನತ್ತ ಎಸೆದು ಹಾಸ್ಯ ಮಾಡುತ್ತಿದ್ದರು. ಮಗನ ದಾಕ್ಷಿಣ್ಯಕ್ಕೆ ನಮ್ಮ ತಂದೆ ಬಿ. ರುದ್ರಪ್ಪ ಅಧ್ಯಕ್ಷತೆ ವಹಿಸುತ್ತಿದ್ದರು. ನನ್ನ ಎರಡನೆಯ ತಂಗಿ ಪುಟ್ಟಮ್ಮ ಕಲಿತದ್ದ ಅವಳ ಪ್ರಿಯವಾದ "ಭರತ ಮಾತೆಯೇ ಭರತ ಮಾತೆಯೇ ಎಂದು ನೀ ತಲೆ ಎತ್ತುವೆ । ಎಂದು ಲೋಕದ ಜನರ ಹೃದಯದಿ ನಿನ್ನ ಮಹಿಮೆಯು ಬಿತ್ತುವೆ" ರಾಷ್ಟ್ರಗೀತೆಯು ನಮ್ಮ ಸಭೆಯ ಪ್ರಾರ್ಥನೆಯಾಗಿರುತ್ತಿತ್ತು. ಪತ್ರಿಕೆಯಲ್ಲಿ ಓದಿದ ಸತ್ಯಾಗ್ರಹ ಚಳುವಳಿಗೆ ಸಂಬಂಧಿಸಿದ ಸುದ್ದಿಗಳನ್ನೂ ಮಹಾತ್ಮ ಗಾಂಧೀಜಿ, ಸರ್ದಾರ್ ಪಟೇಲ್, ಸುಭಾಷ್ ಚಂದ್ರ ಬೋಸ್, ಆಚಾರ್ಯ ನರೇಂದ್ರದೇವ, ಜಯಪ್ರಕಾಶ ನಾರಾಯಣ್ ಇವರು ರಾಷ್ಟ್ರಮಟ್ಟದ ನಾಯಕರಾಗಿ ನಮ್ಮ ಭಾಷಣಗಳಲ್ಲಿ ಉಲ್ಲೇಖಿತರಾಗುತ್ತಿದ್ದರೆ, ಮೈಸೂರು ರಾಜ್ಯಮಟ್ಟದಲ್ಲಿ ಟಿ. ಸಿದ್ಧಲಿಂಗಯ್ಯ, ಭಾಷ್ಯಂ ಅಯ್ಯಂಗಾರ್, ಟಿ. ಸುಬ್ರಹ್ಮಣ್ಯಂ, ಕೆ. ರಂಗಯ್ಯಂಗಾರ್, ಹೆಚ್. ಸಿ. ದಾಸಪ್ಪ, ಆಗ್ಗೆ ತರುಣ ಮುಂದಾಳುಗಳಾದ ಕೆ. ಹನುಮಂತಯ್ಯ, ಹೆಚ್. ಸಿದ್ಧಯ್ಯನವರು, ನಿಜಲಿಂಗಪ್ಪನವರು, ಯಶೋಧರಮ್ಮನವರು ಪ್ರಮುಖವಾಗಿ ಪ್ರಸ್ತಾಪಿತರಾಗುತ್ತಿದ್ದರು.

ಆಗ ನನ್ನೊಡನೆ ಪ್ರಾರಂಭದಲ್ಲಿ ಸಹಕರಿಸಿದವರೆಂದರೆ ಈಡಿಗರ ಟಿ. ನರಸಪ್ಪ, ಚಿಕ್ಕಹನುಮಯ್ಯ, ಕುರುಬರ ಡಿ. ಕೆಂಪಯ್ಯ, ಟಿ. ರಂಗಯ್ಯ, ಅಳ್ಳಿ ರಂಗಯ್ಯ, ಒಕ್ಕಲಿಗರ ಜಯರಾಮಯ್ಯ ಈ ಊರ ಸಾಹುಕಾರರ ತಮ್ಮ ಹುಟ್ಟು ಕುರುಡರಾದ ಡಿ. ಕಾಮಣ್ಣ, ಲಿಂಗಾಯತರ ಪೈಕಿ ಎಸ್. ಶಂಕರಪ್ಪ, ಎಸ್. ಚಂದ್ರಶೇಖರಯ್ಯ, ಟಿ. ಆರ್. ಶಿವಯ್ಯ ಮತ್ತು ನಾನು ನನ್ನ ಕುಟುಂಬಸ್ಥರು.

ಈ ವೇಳೆಗೆ ಧ್ವಜಸತ್ಯಾಗ್ರಹ ಪ್ರಾರಂಭವಾಯಿತು. ಮದ್ದೂರಿನ ಬಳಿ ಶಿವಪುರದ ಸಮಾವೇಶ ನಮ್ಮಲ್ಲಿ ಹೆಚ್ಚಾಗಿ ಸ್ಫೂರ್ತಿ ತುಂಬಿತು. ವಿದುರಾಶ್ವತ್ಥದ ಲಕ್ಷ್ಮಮ್ಮನ ಮರಣ ನಮ್ಮ ಆವೇಶ ಹೆಚ್ಚಿಸಿತು. ಇಷ್ಟಾದರೂ ನಮ್ಮೂರಿನ ಪಟೇಲ್, ಶಾನುಭೋಗರಾಗಲಿ, ಶ್ರೀಮಂತರಾಗಲಿ ಸಹಕಾರ ನೀಡಲಿಲ್ಲ. ಇಡೀ ತಾಲ್ಲೂಕಿನಲ್ಲೇ ಈ ನಿಟ್ಟಿನ ಜಾಗೃತಿ ಮೂಡಲಿಲ್ಲ.

ಕೊರಟಗೆರೆ ತಾಲ್ಲೂಕು ಮುಖ್ಯಸ್ಥಳ. ಅಲ್ಲಿ ರಾಜಶೇಖರಪ್ಪ, ಅವರ ತಮ್ಮ ಶಿವಣ್ಣ, ಜಿ. ಎಲ್. ಕೃಷ್ಣಮೂರ್ತಿ, ಟೈಲರ್ ಚಂದ್ರಣ್ಣ ಬಿಟ್ಟರೆ ಉಳಿದವರೆಲ್ಲಾ ಚಳುವಳಿ ಕಡೆ ನಿರಾಸಕ್ತಿ ಹೊಂದಿದ್ದವರೇ. ವಡ್ಡಗೆರೆ ಮುದ್ದುರಾಮಯ್ಯ, ಸೋಂಪುರದ ಎನ್. ಹನುಮಂತರಾಯಪ್ಪ, ಚಿಕ್ಕನಹಳ್ಳಿ ರಾಮಸ್ವಾಮಿ, ಚಿಕ್ಕ ಹನುಮಂತಯ್ಯ, ದೊಗ್ಗನಹಳ್ಳಿ ದೊಡ್ಡಯ್ಯ, ಬುಕ್ಕಾಪಟ್ಟಣದ ದೊಡ್ಡಯ್ಯ ಇವರುಗಳು ಮಾತ್ರ ಕಂಡುಬರುತ್ತಿದ್ದ ಚಳುವಳಿ ಮುಂದಾಳುಗಳು.

ಈಗ್ಗೆ ನಮ್ಮೂರ ಬಾಲಸಮೂಹ ಯೌವನಸ್ಥರ ಕೂಟವಾಗಿ ಕಾಂಗ್ರೆಸ್ ಕಾರ್ಯಕಾರಿಣಿ ಆಯಿತು. ಮೈಸೂರು ಕಾಂಗ್ರೆಸ್ಸಿನ ಮುಂದಾಳುಗಳಾದ ಎಸ್. ನಿಜಲಿಂಗಪ್ಪ, ಟಿ. ಸಿದ್ಧಲಿಂಗಯ್ಯ, ಕೆ. ಸಿ. ರೆಡ್ಡಿ, ರಂಗರಾಮಯ್ಯ, ವೀರಣ್ಣಗೌಡ, ದಾಸಪ್ಪ, ಹೆಚ್. ಸಿದ್ಧಯ್ಯ, ತಾಯಮ್ಮ, ಯಶೋಧರಮ್ಮ ಮುಂತಾದ ಗಣ್ಯರು ಪ್ರಚಾರ, ಪ್ರವಾಸಕ್ಕೆ ತುಮಕೂರು ಜಿಲ್ಲೆಗೆ ಬಂದರೆಂದರೆ ಕ್ಯಾತಸಂದ್ರ, ಕೊರಟಗೆರೆ ತಾಲ್ಲೂಕಿನ ತೀತ, ಮಧುಗಿರಿ ತಾಲೂಕಿನ ಬ್ಯಾಲ್ಯ ಈ ಸ್ಥಳಗಳು ಭೇಟಿ ಕೊಡಲೇಬೇಕಾದ ಮುಖ್ಯ ಸ್ಥಳಗಳಾಗಿದ್ದವು. ದಿನೇ ದಿನೇ ನಮ್ಮ ಪ್ರಜ್ಞೆ ಅರಳಿತು. ಮುಖ್ಯಸ್ಥರು ಬಂದಾಗಲೆಲ್ಲ ಸಾಲು ಜೋಡಿ ಎತ್ತು ಕಟ್ಟಿ ಗಾಡಿ ಮೇಲೆ ಮುಂದಾಳುಗಳನ್ನು ಮೆರವಣಿಗೆ ಮಾಡಿ ಊರಾಚೆ ಗುಂಡುತೋಪಿನಲ್ಲಿ ಸಭೆ ಏರ್ಪಡಿಸುತ್ತಿದ್ದೆವು. ಬಂದವರಿಗೆ ಚಂದಾ ಪ್ರಕಾರ ಅಕ್ಕಿ ಸಂಗ್ರಹಿಸಿ ಊಟ ಮಾಡಿಸಿ ಕಳಿಸುತ್ತಿದ್ದೆವು. ಹೀಗಾಗಿ ತೀತಾ ಗ್ರಾಮ ಸರ್ಕಾರದ ಕಣ್ಣಿಗೆ ಪುಂಡುಕೋರರ ಗ್ರಾಮವಾಗಿ ಬಹುತೇಕರು ಅದನ್ನೇ ಓಲೈಸುತ್ತಿದ್ದ ಸನ್ನಿವೇಶ ಅದಾಗಿತ್ತು. ಆಗ್ಗೆ ಅರಣ್ಯ ಸತ್ಯಾಗ್ರಹ! ನಮ್ಮೂರಿನ ಯುವಕರ ತಂಡವೇ ದಸ್ತಗಿರಿಯಾಗಿ ಸೆರೆಮನೆ ಸೇರಿ ಅವರ ಕುಟುಂಬಗಳ ಆಗ್ರಹ ನನ್ನತ್ತ ತಿರುಗಿತು! ಜೊತೆಗೆ ಜುಲ್ಮಾನೆ ಹಣ ವಸೂಲಿಗೆ ಪೊಲೀಸ್ ಸಿಬ್ಬಂದಿ ಸಹಿತ ಅಧಿಕಾರಿಗಳು ಬಂದಾಗ ಗ್ರಾಮದ ಶ್ರೀಮಂತರು ಸಹಿತ ಅವರಿಗೆ ನೆರವಾದರೆ ಅದನ್ನು ವಿರೋಧಿಸುವ ಗುಂಪು ನಮ್ಮದಾಯಿತಾದರೂ ನಮ್ಮ ಬಲ ಕಡಿಮೆ ಆಗಿ ಕೆಲವರ ಮನೆ ಜಪ್ತಿ ಆಗುವಾಗ್ಗೆ ಉಳಿದವರ ಮನೆಯಲ್ಲಿ ಏನೂ ದಕ್ಕದಂತೆ ಮಾಡಿದೆವಾದರೂ ಊರ ಜನರೆಲ್ಲರ ಕೋಪಕ್ಕೆ ಶಾಪಕ್ಕೆ ಒಳಗಾಗುವ ಪರಿಸ್ಥಿತಿಯುಂಟಾಗದೆ ತಪ್ಪಲಿಲ್ಲ.

ಪೊಲೀಸರ ದೃಷ್ಟಿಯಲ್ಲಿ ನಾನೊಬ್ಬ ಪುಂಡರ ಮುಂದಾಳು ಎಂಬ ಭಾವನೆ ಬಲಿಯಿತು. ಎಷ್ಟೇ ಯತ್ನಿಸಿದರೂ ತಪ್ಪಿಸಿಕೊಳ್ಳಲಾಗಲಿಲ್ಲ. ಆ ವೇಳೆಗೆ ನನ್ನ ಕುಟುಂಬದ ಪರಿಸ್ಥಿತಿಯಿಂದಾಗಿ ನನ್ನ ದುರ್ಬಲ ಏಳಿಗೆ ತಿಳಿದೋ ಏನೋ ಅಲ್ಲಿಗೆ ಮೂರು ದಿನಗಳ ಮುಂಚೆ ಶೇಂದಿ ಅಂಗಡಿ ಸುಟ್ಟು, ತಂದಿದ್ದ ಶೇಂದಿ ಸಂಗ್ರಹವನ್ನೆಲ್ಲಾ ಚೆಲ್ಲಿ ಹೊಳೆಯಾಗಿ ಹರಿಸಿ ಬಂದಿದ್ದ ವಿದ್ಯಾರ್ಥಿಗಳನ್ನು ವಾಪಸು ಕಳಿಸಿದ್ದ ನಮ್ಮ ದಾಂಧಲೆಗೆ ವಿರುದ್ಧ ಸೇಡು ತೀರಿಸಿಕೊಳ್ಳುವಂತೆ ಸುಬ್ರಹ್ಮಣ್ಯಂ ಎಂಬ ಪೊಲೀಸ್ ಅಧಿಕಾರಿ ಬಲವಾದ ಸಿಬ್ಬಂದಿಯೊಡನೆ ಬೆಳಗಿನ ಜಾವಕ್ಕೆ ಬಂದು ಕಾದು ನನ್ನನ್ನು ದಸ್ತಗಿರಿ ಮಾಡಿ ಕುರುಡ ಕಾಮಣ್ಣ, ಟಿ. ನರಸಪ್ಪ, ಟಿ. ರಂಗಯ್ಯ, ಎನ್. ಶಂಕರಪ್ಪನವರುಗಳನ್ನು ಹಿಡಿಸಿದರು. ಆಗತಾನೇ ನನ್ನ ತಾಯಿಗೆ ಹೆರಿಗೆ ನೋವು ಪ್ರಾರಂಭವಾಗಿದ್ದು ನೆರೆ ಊರಿನ ಹಳ್ಳಿ ಸೂಲಗಿತ್ತಿ ಕರೆಸಬೇಕಾದ  ಕಾಲ ಮನೆಯಲ್ಲಿ ದಿಕ್ಕಿಲ್ಲದ ಸ್ಥಿತಿ. ಯಾರೋ ನೆರೆಮನೆ ಹೆಂಗಸು ನೆರವಾಗಿ ಹೆರಿಗೆ ಮಾಡಿಸಿದ್ದರಂತೆ. ಆ ಸ್ಥಿತಿಯಲ್ಲಿ ಖಾಯಿಲೆ ಬಿದ್ದ ತಾಯಿ ನಿರಂತರ ರೋಗಗ್ರಸ್ತೆಯಾಗಿ ಶಿವಲೋಕ ಸೇರಿದಳು.



ನಾನು ಸೆರೆಮನೆಯಿಂದ ಹಿಂತಿರುಗುವಾಗ್ಗೆ ನಾಲ್ಕು ತಿಂಗಳಾಯಿತು. ಆಗಿನ್ನೂ ನಮ್ಮ ತಂದೆ ಆರೋಗ್ಯ ಕೆಟ್ಟು ಕಾಯಿಲೆ ಗುಣವಾಗಿರಲಿಲ್ಲ. ನಲುಗಿ ಬಾಡಿದ್ದ ತಂಗಿಯರು, ಎದೆಹಾಲು ಕಾಣದೆ ಕಡೇ ಹೆರಿಗೆಯ ಗಂಡು ಶಿಶು ನನ್ನ ಪಾಲಿಗೆ ಉಳಿದಿದ್ದವು. ಮಧುಗಿರಿ ಮುಖ್ಯಸ್ಥರಾದ ಹೆಂಜಾರಪ್ಪನವರು, ಮಾಲಿ ಮರಿಯಪ್ಪನವರು, ನಂಜಯ್ಯಶೆಟ್ಟರು ದಸ್ತಗಿರಿ ಆಗಿದ್ದರು. ನಮ್ಮನ್ನು ಕೇಳುವವರೇ ಇರಲಿಲ್ಲ. ಕೊನೆಗೆ ಬ್ಯಾಲ್ಯದಿಂದ ಆರವತ್ತು ಜನರನ್ನು ಹಿಡಿದು ತಂದು ಅದೇ ಜೈಲಿನಲ್ಲಿ ಕೂಡಿದರು. ಕೊನೆಗೆ ಊಟದ ರೇಷನ್ ನಮ್ಮ ವಶಕ್ಕೆ ಕಲ್ಲು ನೆಲ್ಲೂ ವಿಂಗಡಿಸಿ ಅನ್ನ ಮಾಡಲು ನಾನು ಒಪ್ಪಿದೆ. ಅದರಂತೆ ಒಂದೂವರೆ ತಿಂಗಳು ತಳ್ಳುವಾಗ್ಗೆ ತುಮಕೂರು ಜೈಲಿಗೆ ಸಾಗಿಸಲ್ಪಟ್ಟೆವು. ಅಲ್ಲಿ ಬಿಡುಗಡೆ ಆಗಿ ಊರಿಗೆ ಬರಲಾಗ್ಗೆ ಕೇಂದ್ರ ಸರಕಾರದಲ್ಲಿ ಸ್ವಾತಂತ್ರ್ಯ ಘೋಷಣೆ ಆಯಿತು. ಇನ್ನು ಮೈಸೂರು ಸರದಿ ಪ್ರಾರಂಭವಾಗಬೇಕು. ಆಗ ನಮ್ಮ ರಾಷ್ಟ್ರಭಕ್ತಿ ಪುಟಗೊಂಡಿತ್ತು. ಊರಲ್ಲಿ ಒಂದು ರಾತ್ರಿ ಪಾಠಶಾಲೆ ಪ್ರಾರಂಭಿಸಿ ೬೦ ಜನರಿಗೆ ಅಕ್ಷರಾಭ್ಯಾಸಕ್ಕೆ ವ್ಯವಸ್ಥೆ ಮಾಡಿದೆವು. ನಮ್ಮ ಜತಗೆ ಟಿ. ನರಸಪ್ಪ ಸಹಕರಿಸಿದ್ದ. ಮಾಮೂಲಿ ಪ್ರಚಾರ ಸಭೆಗಳು ಮತ್ತೆ ಪ್ರಾರಂಭವಾದವು. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಆಗ್ಗೆ ಮೈಸೂರಿನ ಮುಖ್ಯಮಂತ್ರಿ, ಮೈಸೂರಿನ ಸತ್ಯಾಗ್ರಹಿಗಳ ಮೇಲೆ ಕಠಿಣವಾಗಿ ನಡೆದುಕೊಂಡರು.

ಮುಖ್ಯಸ್ಥರನ್ನೆಲ್ಲಾ ಡಿಟೆನರ್ಷನಲ್ಲಿಟ್ಟರು. ತಾಲ್ಲೂಕ್ ತಹಶೀಲ್ದಾರ್ ಯತಿರಾಜಲು, ಪೊಲೀಸ್ ಇನ್ಸ್‌ಪೆಕ್ಟರ್ ಎಸ್. ಡಿ. ಕುಮಾರ ಇವರಿಗೆ ನನ್ನತ್ತ ಗುಮಾನಿ. ಒಂದು ದಿನ ಕೊರಟಗೆರೆಗೆ ಸೈಕಲ್ ಮೇಲೆ ಹೋಗಿದ್ದೆ. ಎಲ್ಲಿಂದಲೋ ಗುರುತಿಸಿ ನನ್ನನ್ನು ಹಿಡಿಸಿ ಲಾಕಪ್ ಮಾಡಿದರು. ಆಗಲೆ ೪೦ ಹುಡುಗರನ್ನು ಬೆದರಿಸಿ ಒಂದು ಓಣಿಯಲ್ಲಿ ಕೂಡಿದ್ದರು. ಹೆದರಿದ ಅವರು ಶಬ್ದವಿಲ್ಲದೆ ಕುಳಿತಿದ್ದರು. ನನಗದು ಗೊತ್ತಿರಲಿಲ್ಲ. ರಾತ್ರಿ ೯ ಗಂಟೆಗೆ ಪೊಲೀಸ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ೭–೮ ಜನ ದಫೇದಾರ್ ಕಾನ್ಸ್‌ಟೆಬಲ್‌ಗಳು ನಾನಿದ್ದ ಕಡೆ ಬಂದು ಸುತ್ತುವರಿದರು. ನಿಂತಿರುವರೆಲ್ಲರೂ ಕೈಯಲ್ಲಿ ಲಾಠಿ ಹಿಡಿದಿದ್ದರು. ಬಂದವರೇ ಒಂದೇ ಸವನೆ ಮನಸೋ ಇಚ್ಛೆ ಚಚ್ಚಿದರು. ನನಗೆ ದೈಹಿಕವಾಗಿ ಬಹಳ ಯಾತನೆ, ಮನಸ್ಸಿನಲ್ಲಿ ರೋಷ! ಏಕವಚನದಲ್ಲಿ ಯಾರೋ ಅಯೋಗ್ಯ ನಿಮ್ಮೂರಿನಲ್ಲಿ ಮುಂದಾಳು? ಎಂಬ ಆಗ್ರಹದ ಪ್ರಶ್ನೆ ಇನ್ಸ್‌ಪೆಕ್ಟರಿಂದ. ನನ್ನ ಸೈರಣೆ ಮೀರಿತು. "ನಾನಲ್ಲ ಅಯೋಗ್ಯ, ನಿನಗೇ ಅದು ಸಲ್ಲುವುದು. ಮೊದಲು ಗೌರವ ಕೊಟ್ಟು ಗೌರವ ಪಡೆಯುವುದನ್ನು ಕಲಿ" ಎಂದು ಮಾರುತ್ತರ ನೀಡಿದಾಗ ಮತ್ತೆ ಪೆಟ್ಟಿನ ಪ್ರಸಾದವಾಯಿತು. ರೋಷ ಕೆರಳಿ "ಕೊಂದು ಬಿಡಿ ರಾಕ್ಷಸರಿರಾ! ನಾನೇ ಮುಂದಾಳು ಸಿಕ್ಕಿದ್ದೇನೆ. ನಿಮ್ಮ ಶಕ್ತಿಯೆಲ್ಲಾ ಪ್ರಯೋಗಿಸಿ" ಎಂದು ಎತ್ತರದ ದನಿಯಲ್ಲಿ ಅಬ್ಬರಿಸಿದೆ. ಏಕೋ ಏನೋ ಪೆಟ್ಟುಗಳು ಮುಂದುವರಿಯಲಿಲ್ಲ. "ಇದರ ಪ್ರತೀಕಾರ ನೀವೂ ಅನುಭವಿಸಬೇಕಾಗಬಹುದು" ಎಂದೆ ಸಿಟ್ಟಿನಿಂದ. ಮೊದಲೇ ಮಕ್ಕಳನ್ನು ಕೂಡಿದ್ದ ಕೋಣೆಗೆ ನನ್ನನ್ನು ತಳ್ಳಿದ್ದರು. ಹೆದರಿದ್ದ ಹುಡುಗರಿಗೆ ಧೈರ್ಯ ತುಂಬಿದೆ. ತಕ್ಷಣ ಚುರುಕಾದರು. ಒಟ್ಟಾಗಿ ಜಯಕಾರ ಹಾಕಲು ತೊಡಗಿದೆವು. ಅವರು ನಮ್ಮನ್ನು ಸುಮ್ಮನಿರಿಸಲಾಗಲಿಲ್ಲ. ಬೆಳಗ್ಗೆ ರಿಸರ್ವ್ ಕರೆಸಿ ನಮ್ಮನ್ನು ದಮನಿಸಲು ಪ್ರಯತ್ನಿಸಿದರು. ಎಲ್ಲಾ ಕಡೆ ಎದ್ದ ಗಲಭೆ ಕಾರಣ ಸಾಧ್ಯವಾಗದೆ ಸಂಜೆಗೆ ಒಂದು ಬಸ್‌ನಲ್ಲಿ ನಮ್ಮನ್ನು ತುಂಬಿಕೊಂಡು ಹೋಗಿ ಒಂದು ಕಾಡಿನಲ್ಲಿ ಬಿಡಲು ಯತ್ನಿಸಿದರು. ನಾನೇ ತಂತ್ರ ಮಾಡಿ ಸಮಾಲೋಚನೆಗೆ ದೂರದಲ್ಲಿ ಕುಳಿತಿದ್ದ ಪೊಲೀಸರನ್ನು ಬಿಟ್ಟು ಬಸ್‌ನವರನ್ನು ಬೆದರಿಸಿ ನಾವೇ ಹೊರಟು ಬಂದೆವು. ಈ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿ ತುಮಕೂರು ಮಧುಗಿರಿ ಸುತ್ತಲ ಹಳ್ಳಿಗಳು ನಮ್ಮ ತೀತಾ ಗ್ರಾಮದಿಂದ ಸುಮಾರು ಹತ್ತಾರು ಸಾವಿರ ಜನ ಧಾವಿಸಿದರು. ಆ ದಿನ ಯಾವುದೇ ದಾಂಧಲೆ ಮಾಡದಂತೆ, ಟ್ರಜರಿ ಮುತ್ತಿಗೆ ಹಾಕಿದಂತೆ, ತಾಲ್ಲೂಕ್ ಕಛೇರಿ ಸುತ್ತ



ವ್ಯೂಹ ನಿಲ್ಲಿಸಿ, ಒಳಗಿನವರು ಹೊರಕ್ಕೂ ಹೊರಗಿನವರು. ಒಳಕ್ಕೂ ಹೋಗದಂತೆ, ಬೈಠಕ್ ಮಾಡಿದೆವು. ನಮ್ಮಿಂದ ಕಿತ್ತುಕೊಂಡಿದ್ದ ಬಾವುಟಗಳೆಲ್ಲವನ್ನೂ ಹಿಂದಿರುಗಿಸುವಂತೆ ಬೇಡಿಕೆ ನಮ್ಮದು. ಉದ್ರೇಕದ ಜನರ ಕಲ್ಲೇಟಿಗೆ ತಪ್ಪಿಸಿಕೊಳ್ಳಲು ಪೊಲೀಸರು ದಿಕ್ಕಾಪಾಲಾದರು. ತಹಶೀಲ್ದಾರರಿಗೆ ಸಿಬ್ಬಂದಿಗೆ ಊಟ ತಿಂಡಿ ನೀರು ಯಾವುದನ್ನೂ ಒದಗಿಸಲಾಗಲಿಲ್ಲ. ಸುಸ್ತಾದ ತಹಶೀಲ್ದಾರರು ಬಾವುಟ ಹಿಂತಿರುಗಿಸಿದರು. ಅದೇ ಬಾವುಟವನ್ನು ತಾಲ್ಲೂಕು ಕಚೇರಿ ಮೇಲೆ ಹಾರಿಸಿ ಸಭೆಯವರಿಗೆ ಅಭಿನಂದಿಸಿ ರಾತ್ರಿಗೆ ಚದುರಿ ನಮ್ಮೂರಿಗೆ ಹಿಂದಿರುಗಿದೆ. ಆ ದಿನವೇ ಮೈಸೂರಿನ ಅರಸರೂ ಒಪ್ಪಿ ಜವಾಬ್ದಾರಿ ಸರ್ಕಾರ ಘೋಷಿತವಾಯಿತು. ಹೀಗೆ ಸ್ವಾತಂತ್ರ್ಯ ಹೋರಾಟದ ಇತಿಹಾಸ ಬಹಳ ದೊಡ್ಡದು.

ಬೆಂಗಳೂರು ಕೆಂಪೇಗೌಡ ರಸ್ತೆ ಯಲಹಂಕ ಬಾಗಿಲು ಆಂಜನೇಯ ದೇವಸ್ಥಾನದ ಎದುರು ಶ್ರೀನಿವಾಸ ದೇವಸ್ಥಾನ ಹಿಂಭಾಗ ನಿಲ್ಲಿಸಿರುವ ಸ್ಮಾರಕ ಶಿಲೆಯಲ್ಲಿ ತುಮಕೂರು ಜಿಲ್ಲೆ ಶಿರಾ ತಾಲೂಕ್ ದೊಡ್ಡಬಾಣಗೆರೆ ನಿವಾಸಿ ಶಾಮಣ್ಣ ಎಂಬ ವಿದ್ಯಾರ್ಥಿ ಹುತಾತ್ಮನಾಗಿದ್ದಾನೆ. ಅವನ ತಂದೆ ಹೆಸರು ಬೇಟೆ ರಂಗಪ್ಪ, ತಾಯಿ ಭಾಗೀರಥಮ್ಮ. ಇವರ ದ್ವಿತೀಯ ಪುತ್ರ ಶಾಮಣ್ಣ ಸ್ವಾತಂತ್ರ್ಯ ಚಳುವಳಿಯಲ್ಲಿ ಹುತಾತ್ಮನಾದವನು. ಬೇಟೆ ರಂಗಪ್ಪನವರ ಮೊದಲ ಪತ್ನಿ ಸುಬ್ಬಮ್ಮ ಇವರಿಗೆ ಮಕ್ಕಳು ಆಗದೇ ಇರುವ ಕಾರಣ ಸುಬ್ಬಮ್ಮನವರ ತಂಗಿ ಭಾಗೀರಥಮ್ಮನವರನ್ನೇ ಬೇಟೆ ರಂಗಪ್ಪ ವಿವಾಹವಾದರು. ಹಿರಿಯ ಮಗ ಬಿ. ನರಸಿಂಹಮೂರ್ತಿ, ಕಿರಿಯ ಮಗ ಶಾಮಣ್ಣ. ಈತ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವಾಗ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹುತಾತ್ಮನಾಗಿದ್ದು. ಮುಂದೆ ಭಾಗೀರಥಮ್ಮನವರಿಗೆ ಜೀವನ ಬಹಳ ಕಷ್ಟವಾದಾಗ ಆಕೆ ಬೆಂಗಳೂರಿಗೆ ಹೋಗಿ ಎಂಪೈರ್ ಸ್ಟುಡಿಯೋ ಫೋಟೋಗ್ರಾಫರ್ ಸಮಯವನ್ನು ಅನುಸರಿಸಿ ಆತ ಸ್ಟುಡಿಯೋ ಬೀಗ ಹಾಕಿದ ಮೇಲೆ ಕರೆದುಕೊಂಡು ಬಂದು ಶಾಮಣ್ಣನ ಹೆಸರು ಇರುವ ಸ್ಮಾರಕ ಶಿಲಾ ಫಲಕ ಫೋಟೋ ತೆಗೆಸಿ, ಆ ಫೋಟೋವನ್ನು ಅಂದಿನ ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಅವರಿಗೆ ತೋರಿಸಿದ್ದರಿಂದ ಭಾಗೀರಥಮ್ಮನವರಿಗೆ ಸ್ವಾತಂತ್ರ್ಯ ಹೋರಾಟದ ಪಿಂಚಣಿ ಬರಲು ಸಹಾಯವಾಯಿತು. ಈ ಎಲ್ಲಾ ಮಾಹಿತಿ ನನಗೆ ಗೊತ್ತಾಗಿದ್ದು ಬಳ್ಳಾರಿ ಸರ್ಕಾರಿ ಪಂಡಿತ ತಾರಾನಾಥ ಆಯುರ್ವೇದ

ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ನನ್ನ ಕಿರಿಯ ಸ್ನೇಹಿತ ಡಾ. ದೊಡ್ಡಬಾಣಗೆರೆ ಮಂಜುನಾಥ ಭಾರದ್ವಾಜರಿಂದ. ಈತ ಶಾಮಣ್ಣ ಅವರ ಅಣ್ಣನ ಮಗ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಯುವಕರನ್ನು ರಕ್ಷಿಸಲು ಮಹಾಜನತೆ ತನ್ನ ಕೈಲಾದ ಸಹಾಯ ಸಹಕಾರವನ್ನು ನೀಡಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಸಾಮಾನ್ಯ ಜನ, ರೈತರು, ಯುವ ಮುಂದಾಳುಗಳನ್ನು ಕುರಿ ದೊಡ್ಡಿಯಲ್ಲಿ, ಹುಲ್ಲಿನ ಬಣಿವೆಯಲ್ಲಿ, ದನದ ಕೊಠಡಿಯಲ್ಲಿ ಬಚ್ಚಿಟ್ಟು ರಕ್ಷಣೆ ಮಾಡಿದ್ದಾರೆ. ಅಕ್ಷರ ಬರುವವರು ತಮ್ಮ ಕೈಯಲ್ಲಿ ಸಾಧ್ಯವಾದಷ್ಟು ಕರಪತ್ರಗಳನ್ನು ಪ್ರತಿಮಾಡಿ ಬಸ್ಸಿನ ಮೂಲಕ, ರೈಲಿನ ಮೂಲಕ ನೆರೆಯ ಗ್ರಾಮಗಳಿಗೆ ಕಳುಹಿಸಿ ಕೊಟ್ಟಿದ್ದಾರೆ. ಅನಕ್ಷರಸ್ಥರು ಜೋಪಾನವಾಗಿ ಅಕ್ಷರ ಬರುವವರ ಹತ್ತಿರ ಓದಿಸಿ ವಿಷಯ ತಿಳಿದುಕೊಂಡಿದ್ದಾರೆ. ಈ ಎಲ್ಲಾ ಮಹಾಜನತೆಯ ಒಟ್ಟು ಹೋರಾಟದ ಫಲ ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾಗಿದ್ದು. ಅಂದಿನ ಮಹಾಜನತೆ ಕಾಯಾ ವಾಚಾ ಮನಸಾ ಸದಾ ದೇಶ ಸ್ವಾತಂತ್ರ್ಯವಾಗಬೇಕು ಎಂದು ಹಗಲು ಇರುಳು ಜಪ ಮಾಡುತ್ತಿದ್ದರು.

ಪ್ರಕಟಿತ ಮತ್ತು ಅಪ್ರಕಟಿತ ಸ್ವಾತಂತ್ರ್ಯ ಹೋರಾಟ ಸಮಯದಲ್ಲಿ ಹುಟ್ಟಿದ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಬೇಕು. ಗಾಂಧೀಜಿ ಹರಿಜನೋದ್ಧಾರಕ್ಕೆ ಬಹಳಷ್ಟು ಹೋರಾಟ ಮಾಡಿದರು. ಆ ಸಂದರ್ಭದಲ್ಲಿ ಗಾಂಧೀಜಿ ಅವರ ಉದ್ದೇಶಕ್ಕನುಗುಣವಾಗಿ ಅನೇಕ ರಚನಾತ್ಮಕ ಕಾರ್ಯಗಳು ನಡೆದವು. ಅಂತಹ ಸಂದರ್ಭದಲ್ಲಿ ಹೊರಬಂದ ಪುಸ್ತಕವೇ 'ಶರಣರು ಕೈಕೊಂಡ ಅಸ್ಪೃಶ್ಯೋದ್ಧಾರ ಕಾರ್ಯ' (ಶರಣರ ೧೦೧ ಮಹಾವಾಕ್ಯಗಳ ಸಂಗ್ರಹ) ಸಂಪಾದಕರು ಜೀರಗೆ ಕಟ್ಟೆ ಬಸಪ್ಪ, ಬೆಂಗಳೂರು, ಎಸ್. ಆರ್. ಮಲ್ಲಪ್ಪ ತಿಪಟೂರು. ೧೯೪೮ರಲ್ಲಿ ಪ್ರಕಟವಾದ ಈ ಪುಸ್ತಕವನ್ನು ಮಹಾತ್ಮ ಗಾಂಧೀಜಿಯವರಿಗೆ ಅರ್ಪಿಸಲಾಗಿದೆ. ಮುದ್ರಿತ ಪುಸ್ತಕದಲ್ಲಿ ಈ ರೀತಿ ಬರೆಯಲಾಗಿದೆ. "ಇಪ್ಪತ್ತನೆಯ ಶತಮಾನದ ಬಸವೇಶ್ವರರಾಗಿ ಮಾನವ ವಾತ್ಸಲ್ಯದಿಂದ ಅಸ್ಪೃಶ್ಯೋದ್ಧಾರ ಕಾರ್ಯವನ್ನು ಕೈಕೊಂಡ ಮಹಾತ್ಮ ಗಾಂಧೀಜಿಯವರ ಸ್ಮಾರಕವಾಗಿ ಈ ಗ್ರಂಥವನ್ನು ಪ್ರಕಟಿಸಲಾಗಿದೆ".

ಪ್ರಕಟಿತ ಗ್ರಂಥದಲ್ಲಿ ಬಸವಣ್ಣ, ಚನ್ನಬಸವೇಶ್ವರ, ಜೇಡರ ದಾಸಿಮಯ್ಯ, ಸಿದ್ಧರಾಮೇಶ್ವರ, ಅಂಬಿಗರ ಚೌಡಯ್ಯ, ಹಡಪದಪ್ಪಣ್ಣ, ಮಾದಾರ ಚೆನ್ನಯ್ಯ,



ಉರಿಲಿಂಗಪೆದ್ದಿ, ಮೆರಮಿಂಡಯ್ಯ, ಸೊಡ್ಡಳ ಬಾಚರಸ, ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಪದ್ಮಣಾಂಕ, ಭೀಮಕವಿ, ಸರ್ವಜ್ಞಮೂರ್ತಿ, ಸಿದ್ಧನಂಜೇಶ, ಷಡಕ್ಷರದೇವ, ಮುಪ್ಪಿನ ಷಡಕ್ಷರಿ, ನಿಷ್ಕಳಂಕ ಚಿದಾನಂದ ಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಚನ್ನಪ್ಪ ಕವಿ, ಷಣ್ಮುಖ ಶಿವಯೋಗಿ, ಕಟ್ಟೆಯ ಬಸವೇಶ್ವರ, ಸಿರುಮ, ಮಾ.ನಂ. ಶಿವಪ್ಪ, ಮಾ.ನಂ. ನಂಜಪ್ಪ ಇವರುಗಳು ಬರೆದ ವಚನ, ಪದ್ಯ, ಆಧುನಿಕ ವಚನಗಳನ್ನು ಒಳಗೊಂಡಿದೆ. ಪ್ರಕಟಿತ ಕೃತಿಗೆ ಅಂದಿನ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಮುನ್ನುಡಿ ಬರೆದಿದ್ದು ಅದನ್ನು ಯಥಾವತ್ತಾಗಿ ಕೊಡಲಾಗಿದೆ.

"ಅಸ್ಪೃಶ್ಯೋದ್ಧಾರದ ವಿಚಾರದಲ್ಲಿ ಶರಣರು ನಡೆದು ನುಡಿದಿರತಕ್ಕ ನೂರ ಒಂದು ಮಹಾವಾಕ್ಯಗಳನ್ನೊಳಗೊಂಡ ಈ ಗ್ರಂಥವನ್ನು ನಾನು ಆಮೂಲಾಗ್ರವಾಗಿ ಓದಿ ಆನಂದಪಟ್ಟಿದ್ದೇನೆ. ಈ ಗ್ರಂಥಕ್ಕೆ ಮುನ್ನುಡಿಯ ಅವಶ್ಯಕತೆಯೇ ಇಲ್ಲವೆಂದು ನನಗೆ ಅನ್ನಿಸುತ್ತದೆ. ಶರಣರು ಸಾರಿರುವ ಈ ಸರಳ ವಚನಗಳು ಎಲ್ಲ ಮಾನವರ ಹೃದಯಗಳನ್ನು ಆಕರ್ಷಣೆ ಮಾಡ ತಕ್ಕವುಗಳಾಗಿವೆ. ಮಹಾತ್ಮ ಗಾಂಧೀಯವರ ಬೋಧನೆಗಳು ಹೇಗೆ ಮಾನವರೆಲ್ಲರಿಗೂ ಪ್ರಿಯವಾಗಿವೆಯೋ ಹಾಗೆ ಈ ವಚನಗಳೂ ಎಲ್ಲ ಮಾನವರಿಗೆ ಪ್ರಿಯವಾಗಿ, ಮಾನವರ ಅಜ್ಞಾನವನ್ನು ಹೋಗಲಾಡಿಸಿ ವಿಶ್ವ ಸಹೋದರತ್ವವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸತಕ್ಕವುಗಳಾಗಿವೆ.

ದಿನವಹಿಯೂ ಪಠಿಸಿ ಮನನ ಮಾಡಿಕೊಳ್ಳಲು ತಕ್ಕಂತೆ ಈ ಗ್ರಂಥವು ಅಲಂಕಾರವಾಗಿ ಮುದ್ರಿತವಾಗಿದೆ. ಈ ಗ್ರಂಥವನ್ನು ಕೈಯಲ್ಲಿ ಹಿಡಿದರೆ ಸಾಕು ಮನಸ್ಸು ಪರಿಶುದ್ಧವಾಗುತ್ತದೆ. ಈ ಪುಟ್ಟ ಕೈಪಿಡಿ ಅಸ್ಪೃಶ್ಯತಾ ನಿವಾರಣೆಯ ಅಥವಾ ನಿರೋಧದ ಕಾನೂನುಗಳಿಗಿಂತ ಎಷ್ಟೋ ಮಿಗಿಲಾಗಿ ಕೆಲಸ ಮಾಡಿ ಮಾನವರ ಹೀನತನವನ್ನೇ ಬದಲಾಯಿಸಿ ಒಳ್ಳೆಯ ಪರಿಣಾಮವನ್ನು ಮಾಡತಕ್ಕುದಾಗಿದೆ. ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುವ ಗೌರವವನ್ನು ನನಗೆ ಕೊಟ್ಟುದಕ್ಕಾಗಿ ನಾನು ಶ್ರೀ ಎಸ್. ಆರ್. ಮಲ್ಲಪ್ಪನವರಿಗೆ ವಂದಿಸುತ್ತೇನೆ." (ಟಿ. ಸಿದ್ಧಲಿಂಗಯ್ಯ, ಬೆಂಗಳೂರು ದಿನಾಂಕ ೨೧–೬–೧೯೪೮)

ಮೂಲತಃ ಮಧುಗಿರಿ ತಾಲ್ಲೂಕಿನವರಾಗಿ ಬೆಂಗಳೂರಿನಲ್ಲಿ ನೆಲೆಸಿದ ಚಿತ್ರಕಲಾ ಪರಿಷತ್ತಿನ ಸಂಸ್ಥಾಪಕ ನಂಜುಂಡರಾವ್ ಅವರ ತಂದೆ ದಾಸಪ್ಪನವರು

ಗಾಂಧೀಜಿ ಕುರಿತು ಶತಕ ಬರೆದು ಮುದ್ರಣ ಮಾಡಿಸಿದ್ದರು. ಗಾಂಧೀಜಿ ಅವರ ಬಗ್ಗೆ ಒಂದು ಬೃಹತ್ ಕವನ ಸಂಕಲನ ಸಿದ್ಧಮಾಡಿ ಇಟ್ಟಿದ್ದರು. ಈ ಎಲ್ಲಾ ಸಾಹಿತ್ಯವನ್ನು ನಂಜುಂಡರಾವ್ ಅವರು ನನಗೆ ತೋರಿಸಿದ್ದರು. ಇತಿಹಾಸಜ್ಞರಾದ ದಾಸಪ್ಪನವರು ಉಮಾಪತಿ ಎಂಬ ಕಾವ್ಯನಾಮದಲ್ಲಿ ಹತ್ತಾರು ಲೇಖನಗಳನ್ನು ಬರೆದಿದ್ದಾರೆ.

ಲಭ್ಯ ಮಾಹಿತಿ, ಫೋಟೋ, ಕರಪತ್ರ, ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಭಾರತೀಯ ಸ್ವಾತಂತ್ರ್ಯ ಹೋರಾಟದ ಬಗ್ಗೆ ಇನ್ನಷ್ಟು ಗಟ್ಟಿಯಾದ ಮಾಹಿತಿಯನ್ನು ಸಂಗ್ರಹಿಸಬೇಕಾದ ಅನಿವಾರ್ಯತೆ ಇದೆ.

❑

## ಪರಾಮರ್ಶನ ಗ್ರಂಥಗಳು


೧. ಗಾಂಧಿ ಮಹಾತ್ಮರ ತತ್ವಬೋಧೆ
ಬಿ. ಶಿವಮೂರ್ತಿಶಾಸ್ತ್ರಿ ತುಮಕೂರು, ೧೯೨೭.

೨. ಗಾಂಧೀ ಮತ್ತು ಕರ್ನಾಟಕ
ಸಂ: ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಬೆಂಗಳೂರು, ೧೯೬೯.

೩. ಜೀವನ ಸ್ಮೃತಿಗಳು
ಬಿ. ಶಿವಮೂರ್ತಿಶಾಸ್ತ್ರಿಗಳು, ಬೆಂಗಳೂರು, ೧೯೭೪.

೪. ಗಾಂಧೀ ಸಾಹಿತ್ಯ (ಸಾರಸಂಗ್ರಹ)
ಜಿ.ವಿ. ನಾರಾಯಣಮೂರ್ತಿ, ಬೆಂಗಳೂರು, ೧೯೭೨.

೫. ಬೆಂಗಳೂರಿನಲ್ಲಿ ಮಹಾತ್ಮ ಗಾಂಧೀ
ವೇಮಗಲ್ ಸೋಮಶೇಖರ್, ಬೆಂಗಳೂರು, ೨೦೦೪.

೬. ಗಾಂಧೀಜಿ ಸಂದರ್ಶನ (ಲೇಖನ)
ಬಿ. ಶಿವಮೂರ್ತಿಶಾಸ್ತ್ರಿ ಪ್ರಬುದ್ಧ ಕರ್ನಾಟಕ ಸಂ.೫೧, ಸಂಚಿಕೆ ೫೧, ಗಾಂಧೀ ಸಂಚಿಕೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೧.

೭. ಶರಣರು ಕೈಕೊಂಡ ಅಸ್ಪೃಶ್ಯೋದ್ಧಾರ ಕಾರ್ಯ
ಸಂ: ಜೀರಗೆ ಕಟ್ಟೆ ಬಸವಪ್ಪ, ಎಸ್. ಆರ್. ಮಲ್ಲಪ್ಪ ತಿಪಟೂರು, ೧೯೪೮.

೮. ಚಲೇಜಾವ್ ಚಳುವಳಿ ೫೦ನೇ ವಾರ್ಷಿಕೋತ್ಸವ ಸಂಚಿಕೆ ತುಮಕೂರು, ೧೯೯೨.

೯. ತುಮಕೂರಿನ ವೀರವನಿತೆಯರು ಕೆ. ಪುಟ್ಟರಂಗಪ್ಪ, ತುರುವೇಕೆರೆ.

೧೦. ವೀರಪಥ–ತುರುವೇಕೆರೆ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರ ವೀರಕಥನ, ಲೇಖಕರು: ಕೆ. ಪುಟ್ಟರಂಗಪ್ಪ, ೨೦೨೧.

❑

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |